ನೇಸರು

ತಿಂಗಳೋಲೆ

₹ 5/-

PAGES 20

AUGUST 2023 | Nesaru Tingalole | Vol. XLI - 08

TODAY LET US TAKE SOME TIME TO VALUE OUR NATION AND NEVER FORGET THE SACRIFICES

HAPPY INDEPENDENCE DAY

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

FORTHCOMING EVENTS

On 15th AUGUST 2023 @ 10.00 a.m.

Flag Hoisting

Independence Day Celebrations

At The Mysore Association's premises

MUSIC COMPETITION

The Mysore Association is conducting Music Compeition to promote fresh talent in Karnatic Classical Music, Folk Songs, Devotional Songs and Devaranama

on 27th August 2023 at 10.00 a.m

at The Mysore Association Premises.

The competition will be held in three age groups:

(1) 7 yrs. to 9 yrs. (9 years completed)

(2) 10 yrs. to 13 yrs. (10 years & 13 years completed)

(3) 14 yrs. to 19 yrs. (14 years & 19 years completed)

For Details – Contact : 99209 66497 / 2403 7065

ಮೈಸೂರು ಅಸೋಸಿಯೇಷನ್ ಮತ್ತು ರಾಷ್ಟ್ರೀಯ ಕನ್ನಡ ವಿದ್ಯಾ ಸಂಸ್ಥೆ

ನೀಡುವ

ಬಸವ ವಚನ ನೃತ್ಯ ಕಲಾ

(ಹಿಂದಿಯಲ್ಲಿ)

ನಿರ್ದೇಶಕಿ : ಶ್ರೀಮತಿ ಸ್ನೇಹಾ ಕಪ್ಪಣ್ಣ

ಶುಕ್ರವಾರ 18.08.2023ರ ಮಧ್ಯಾಹ್ನ 2.30 ಕ್ಕೆ

ಮುಖ್ಯ ಅತಿಥಿ : ಶ್ರೀ ಐ. ಎಂ. ವಿಠ್ಠಲಮೂರ್ತಿ
(ನಿವೃತ್ತ ಐಎಎಸ್ ಅಧಿಕಾರಿ)
ಹೆಸರಾಂತ ಕಲಾ ಪ್ರೋತ್ಸಾಹಕರು

ಗಾಯಕರು : ರಾಧಿಕಾ ನಂದಿ
ಶಿವಮೊಗ್ಗ ನಿಶಾಂತ್ ವೆಂಕಟೇಶ್

ಅಧ್ಯಕ್ಷತೆ : ಶ್ರೀಮತಿ ಕಮಲ ಕೆ.
ಅಧ್ಯಕ್ಷರು, ಮೈಸೂರು ಅಸೋಸಿಯೇಷನ್, ಮುಂಬೈ
ಶ್ರೀ ಪಾರ್ಥಸಾರಥಿ ನಾಯ್ಕ್
ಅಧ್ಯಕ್ಷರು, ಎನ್.ಕೆ.ಇ.ಎಸ್., ವಡಲಾ, ಮುಂಬೈ

ಸ್ಥಳ : ಮೈಸೂರು ಅಸೋಸಿಯೇಶನ್ ಸಭಾಗೃಹ,
393, ಭಾವು ದಾಜಿ ರಸ್ತೆ, ಮಾಟುಂಗ, ಮುಂಬಯಿ–400 019.

ಎಲ್ಲರೂ ಬಂದು ನೋಡಲೇಬೇಕಾದ ನೃತ್ಯ

The Mysore Association and National Kannada Educational Society

presents

Basava Vachana Nritya Kala

(in Hindi)

Directed by: **Smt. Sneha Kappanna**

on Friday 18.08.2023 at 2.30 PM

Chief Guest : **Shri I. M. Vitthal Murthy**
(Retaired IAS Officer)
Renowned art patrons

Vocal : **Radhika Nandi**
Shimoga Nishant Venkatesh

Presidentship : **Smt. Kamala K.**
President, The Mysore Association, Bombay
Shri Parthasarathi Naik
President, N.K.E.S. Wadala, Mumbai

Venue:
The Mysore Association's Auditorium,
393, Bhau Daji Road, Matunga, Mumbai- 400019

A must-see dance for everyone

ನೇಸರು ತಿಂಗಳೋಲೆ

ಸಂಪುಟ 41 ಅಗಸ್ಟ್–2023 ಸಂಚಿಕೆ 8

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ಭೂಮಿ ತಾಯಿ

✍ **ಡಾ. ಜ್ಯೋತಿ ಸತೀಶ್**

ಸಾಧಾರಣವಾಗಿ ಮಕ್ಕಳಿಂದ ಹಿಡಿದು ಹಿರಿಯರೆಲ್ಲರಿಗೂ ಮಳೆಗಾಲವೆಂದರೆ ಪ್ರೀತಿ. ಬಿಸಿಲಿನ ತಾಪಕ್ಕೆ ಸಿಲುಕಿ ಸತ್ತು ಬಿದ್ದಿದ್ದ ಭೂಮಿ ಥಟ್ಟನೆ ಮರುಜೀವ ಪಡೆದು ತನ್ನ ಸುಪ್ತ ಸೌಂದರ್ಯವನ್ನು ಸಾರುತ್ತದೆ. ಮಳೆಗಾಲದಲ್ಲಿ ಎಲ್ಲೆಡೆ ಹಚ್ಚ ಹಸುರಿನಿಂದ ಪ್ರಕೃತಿ ಕಂಗೊಳಿಸುತ್ತದೆ. ನಮ್ಮ ಕಣ್ಣಿಗೆ ಪ್ರಕೃತಿ ನವವಧುವಿನಂತೆ ಕಾಣಿಸುತ್ತಾಳೆ. ಆ ಸೊಬಗನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ನಮ್ಮ ಊರ ಕಡೆ ಈ ಸಮಯದಲ್ಲಿ ಭತ್ತವನ್ನು ಬೆಳೆಯುತ್ತಾರೆ. ಎತ್ತ ನೋಡಿದರೂ ಹಸುರಿನಿಂದ ಪ್ರಕೃತಿ ಮೈತುಂಬಿ ನಲಿಯುವುದನ್ನು ನೋಡಬಹುದು. ಪ್ರಕೃತಿಯ ಮಡಿಲಲ್ಲಿ ಸಿಗುವ ನೆಮ್ಮದಿ ಬೇರೇಲ್ಲೂ ಇಲ್ಲ. ಭಾರತ ಕೃಷಿಪ್ರಧಾನ ದೇಶ. ಇಲ್ಲಿ ಹೆಚ್ಚಿನವರು ವ್ಯವಸಾಯವನ್ನೇ ಅವಲಂಬಿಸಿ ಬದುಕನ್ನು ಸಾಗಿಸುತ್ತಿದ್ದರು. ಆದರೆ ಜಾಗತೀಕರಣದ ಹಾವಳಿಯಿಂದಾಗಿ, ಕೃಷಿಯೋಗ್ಯ ಭೂಮಿಯೆಲ್ಲ ವಾಣಿಜ್ಯಕರಣಕ್ಕೆ ಬಳಸಲಾಗುತ್ತಿದೆ. ಮೊದಲೆಲ್ಲ ಈಗ ನಮ್ಮ ಕಡೆ ಸಾಗುವಳಿಯಿಂದ ಹಿಡಿದು, ಬೀಜ ಬಿತ್ತನೆ, ಸಸಿ ನೆಡುವುದು, ಕಟಾವು ಎಲ್ಲವೂ ಆಳುಗಳನ್ನು ಹಾಕಿಕೊಂಡು ಮಾಡುತ್ತಿದ್ದರು. ಈಗ ಎಲ್ಲವನ್ನೂ ಯಂತ್ರದಿಂದ ಮಾಡಿಸುತ್ತಿರುವುದರಿಂದ ಜನರಿಗೆ ಕೆಲಸವಿಲ್ಲದ ಹಾಗೆ ಆಗಿದೆ. ಎತ್ತು, ಎಮ್ಮೆಗಳನ್ನು ಸಾಕುವವರು ಕಡಿಮೆಯಾಗಿರುವುದರಿಂದ ಗೆದ್ದೆಗೆ ಗೊಬ್ಬರವೂ ಇಲ್ಲವಾಗಿದೆ. ಎಲ್ಲವೂ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಬೆಳೆ ತೆಗೆಯುತ್ತಿದ್ದಾರೆ. ಇದರಿಂದ ರೋಗಗಳು ದಿನದಿನಕ್ಕೆ ಹೆಚ್ಚುತ್ತಿದೆ.

ಗೆದ್ದೆ ಕೆಲಸ ಮಾಡುವುದೆಂದರೆ ಇವತ್ತಿನ ಯುವಜನತೆಗೆ ಹೀನವೃತ್ತಿಯೆನಿಸುತ್ತಿದೆ. ಎಲ್ಲರಿಗೂ ವೈಟ್ ಕಾಲರ್ ಕೆಲಸಗಳೇ ಬೇಕು. ಇವತ್ತು ಹೆಚ್ಚಿನ ಮನೆಯಲ್ಲಿ ಮುದುಕರನ್ನು ಬಿಟ್ಟರೆ, ಹೆಗಲಿಗೆ ಹೆಗಲು ಕೊಡುವ ಯುವಜನತೆ ಕಾಣೆಯಾಗಿದ್ದಾರೆ. ಯುವಕರೆಲ್ಲ ಕೆಲಸದ ಹುಡುಕಾಟಕ್ಕಾಗಿ ಪಟ್ಟಣವನ್ನು ಸೇರುತ್ತಿರುವುದನ್ನು ಕಾಣಬಹುದು. ಹಿಂದೆ ಇದ್ದ ಅವಿಭಕ್ತ ಕುಟುಂಬಗಳೆಲ್ಲ ವಿಭಕ್ತ ಕುಟುಂಬಗಳಾಗಿ ಒಡೆದು ಹೋಗಿದೆ. ಬೇಸಾಯಕ್ಕೆ ಅಂತ ಇದ್ದ ಗದ್ದೆಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದು ಹೀಗೆ ಮುಂದುವರಿದರೆ, ತಿನ್ನುವ ಅನ್ನಕ್ಕೂ ಕುತ್ತು ಬರಬಹುದು. ಮೇಲಾಗಿ ನಮ್ಮ ಸರಕಾರದವರು ಉಚಿತವಾಗಿ ಮನೆಮನೆಗೆ ಅಕ್ಕಿಯನ್ನು ಕೊಡುತ್ತಿರುವುದರಿಂದ, ದುಡಿಯುವ ಕೈಗಳಿಗೆ ಆಲಸ್ಯವಾಗುವುದು ಸಹಜ. 'ಕೈ ಕೆಸರಾದರೆ ಬಾಯಿ ಮೊಸರು' ಎಂದು ಹಿರಿಯರು ಹೇಳುತ್ತಿದ್ದರು. ಆದರೆ ಈಗಿನ ಯುವಜನತೆಗೆ ಅದರ ಮಹತ್ವ ತಿಳಿದಿಲ್ಲ. ಯಾರಿಗೂ ಶ್ರಮವಹಿಸಿ ದುಡಿಯುವುದರ ಆಸಕ್ತಿ ಇಲ್ಲ. ಎಲ್ಲವೂ ಕೂತಲ್ಲೆ ಸಿಗುವಂತಾಗಬೇಕು. ಅದಕ್ಕೆ ಪ್ರಕೃತಿ ಒಮ್ಮೊಮ್ಮೆ ತನ್ನ ರೌದ್ರಾವತಾರ ತೋರಿಸಿ ನಮ್ಮ ಮುಖಕ್ಕೆ ಕನ್ನಡಿ ಹಿಡಿಯುತ್ತಿದೆ. ಭೂಮಿಯನ್ನು ನಂಬಿ ಕೆಟ್ಟವರು ಯಾರೂ ಇಲ್ಲ. ಕರೋನಾ ಸಮಯದಲ್ಲಿ ಎಷ್ಟೋ ಮಂದಿ ತಮ್ಮ ಕೆಲಸಗಳನ್ನು ಕಳೆದುಕೊಂಡು ಮರಳಿ ಊರಕಡೆ ಹೋಗಿ, ಮತ್ತೆ ಅದೇ ಭೂಮಿಯಲ್ಲಿ ಕೆಲಸ ಮಾಡುವಂತಾಗಿದೆ. ಆಗಾಗ ಪ್ರಕೃತಿ ಎಚ್ಚರಿಕೆಯ ಗಂಟೆ ಹೊಡೆದರೂ ನಮ್ಮಂತ ಕುಂಬಕರ್ಣನವರಿಗೆ ಎಚ್ಚರವಾಗುವುದೇ ಇಲ್ಲ.ಭೂಮಿ ತಾಯಿಯ ಮೇಲೆ ನಂಬಿಕೆ ಇಟ್ಟರೆ ಸಫಲತೆ ಕಟ್ಟಿಟ್ಟ ಬುತ್ತಿ ಅನ್ನುವುದನ್ನು ನಮ್ಮ ಹಲವಾರು ರೈತರು ಸಾಧಿಸಿ ತೋರಿಸಿದ್ದಾರೆ.

ಓಪಿಡಿ

(ಉಮಾ ರಾವ್ ಕಥೆಗಳು)

✍ ಉಮಾ ರಾವ್

".... I thought he was the character in search of an author that we novelists wait for all our lives, and if I never allowed him to find me itl was because the end of his story seemed unimaginable..."

Gabriel Garcia Marquez

ನಾನು ಅಲ್ಲಿ ತಲುಪಿದಾಗ ಕಾರಿಡಾರಿನಲ್ಲಿ ಸಾಲಾಗಿ ಒಂದಕ್ಕೊಂದನ್ನು ಪ್ಲಾಸ್ಟಿಕ್ ದಾರದಿಂದ ಕಟ್ಟಿ ಜೋಡಿಸಿಟ್ಟಿದ್ದ ಕುರ್ಚಿಗಳಲ್ಲಿ ಒಂದು ಮಾತ್ರ ಖಾಲಿ ಇತ್ತು. ಸಧ್ಯ ಕೂಡಲು ಜಾಗ ಸಿಕ್ಕಿತಲ್ಲಾ, ಇನ್ನೆಷ್ಟು ಹೊತ್ತು ಕಾಯಬೇಕೋ ಎಂದುಕೊಳ್ಳುತ್ತಾ ಬೇಗ ಹೋಗಿ ಅದರ ಮೇಲೆ ಹ್ಯಾಂಡ್ ಬ್ಯಾಗ್ ಇಟ್ಟೆ. ಅದರಿಂದ ಕಾರ್ಡು ತೆಗೆದು ಎದುರಿಗೇ ಇದ್ದ ಸರ್ಜ್ ಆರ್ಥೋ ಓಪಿಡಿ ಕೋಣೆಯೊಳಗೆ ಹೋಗಿ ಟೇಬಲ್ ಮೇಲಿಟ್ಟೆ. ಟೋಪಿಯಿಂದ ಅಷ್ಟು ಬೆಳ್ಳಿಗೂದಲು ಜೊಂಪೆಯಾಗಿ ಜೋಲುತ್ತಿದ್ದ ಸಿಸ್ಟರ್ ತಲೆ ಎತ್ತಿ ನಗದೆ ಕೇಳಿದಳು "ಅಪಾಯಂಟ್ ಮೆಂಟ್ ಹೈ?" ಹೂಂ ಎಂದಾಗ ಅಲ್ಲಿ ಸೇರಿಸಿಟ್ಟಿದ್ದ ಅಂದಿನ ಅಪಾಯಂಟ್ ಮೆಂಟ್ ನವರ ಫೈಲುಗಳಲ್ಲಿ ಹುಡುಕತೊಡಗಿದಳು. ಮತ್ತೊಮ್ಮೆ ತಲೆ ಎತ್ತಿ "ಎ ಆರ್ ಬಿ? ತುಮ್ ಎಂಪ್ಲಾಯೀ ಹೈ" ಎಂದು ಕೇಳಿದಳು. "ನಹೀಂ... ಬಿ" ಎಂದಾಗ ನಾನಲ್ಲೇ ಕಾದದ್ದನ್ನು ಕಂಡು "ಬಾಹರ್ ಜಾಕೆ ಬೈಠೋ, ಬುಲಾಯೇಗಾ...." ಎಂದಳು. ಹೊರಗೆ ಬಂದು ನನ್ನ ಹ್ಯಾಂಡ್ ಬ್ಯಾಗನ್ನೆತ್ತಿ ತೊಡೆಯ ಮೇಲಿಟ್ಟುಕೊಂಡು ಕೂತೆ.

ನನ್ನ ಬಲಗಡೆ ವಯಸ್ಸಾದವನೊಬ್ಬ ಕೂತಿದ್ದ. ಕಾಲಬೆರಳ ತುದಿಯಿಂದ ಮಂಡಿವರೆಗೂ ಪ್ಲಾಸ್ಟರ್. ಅವನು ಹಾಕಿದ್ದ ಪೈಜಾಮಾ ಶರಟು ನೋಡಿದರೆ ರಿಟೈರ್ಡ್ ಡ್ರೈವರ್. ಟೈರ್ಡ್ ಮನ್ ಇರಬೇಕು ಅನ್ನಿಸಿತು. ಬಾಯಲ್ಲಿ ಒಂದು ಹಲ್ಲು ಇರಲಿಲ್ಲ. ಜೊತೆಗೆ ಸೋಡಾ ಗ್ಲಾಸಿನ ಕನ್ನಡಕ. ಕ್ಷೌರ ಮಾಡಿ ವಾರವಾಗಿರಬಹುದಾದ ಮುಖದ ತುಂಬಾ ಸುಕ್ಕು. ತಲೆ ಮಫ್ಲರ್ ಸುತ್ತಿದ್ದ. ಅವನಿಂದ ತಂಬಾಕು ವಾಸನೆ ತೇಲಿ ಬರುತ್ತಿತ್ತು. ಹೊಟ್ಟೆ ತೊಳೇಸಿತು. ಎದ್ದು ಹೋದರೆ ಬೇರೆಲ್ಲೂ ಕೂಡಲು ಸ್ಥಳವಿರದಿದ್ದರಿಂದ ಕರ್ಚೀಫ್ ಮೂಗು ಬಾಯಿಗೆ ಒತ್ತಿ ಹಿಡಿದ.

ಎಡಪಕ್ಕದಲ್ಲಿ ೨೫-೩೦ ವರ್ಷದ ಹೆಂಗಸು. ಮೈಕೈ ತುಂಬಿಕೊಂಡಿದ್ದಳು. ಗುಲಾಬಿ ಬಣ್ಣದ ಚೈನಾ ಸಿಲ್ಕ್ ಸೀರೆ ಅದೇ ರವಿಕೆ, ಕಿವಿಯಲ್ಲು ಮುತ್ತಿನ ಲೋಲಾಕುಗಳು, ಕತ್ತಿನಲ್ಲಿ ಮುತ್ತಿನ ಸರ. ಅದರ ಕೆಳಗೆ ಚಿನ್ನದಲ್ಲಿ ಸುತ್ತಿದ ಕರಿಮಣಿ. ಒಂದು ಕೈಗೆ ಚಿನ್ನದ ಸ್ಟ್ರಾಪಿನ ಕೈಗಡಿಯಾರ. ಇನ್ನೊಂದರ ತುಂಬಾ ಗುಲಾಬಿ ಬಣ್ಣದ ಗಾಜಿನ ಬಳೆಗಳು ಸೊಂಟದವರೆಗೂ ಇದ್ದ ಒತ್ತು ಕೂದಲನ್ನು ಎತ್ತಿ ಕಟ್ಟಿಕೊಂಡಿದ್ದಳು. ಅದಕ್ಕೊಂದು ಗುಲಾಬಿ ಬಣ್ಣದ ಪ್ಲಾಸ್ಟಿಕ್ ಕ್ಲಿಪ್. ಉಗುರುಗಳಿಗೆ ಕಡು ಕೆಂಪು ನೇಲ್ ಪಾಲಿಶ್. ತುದಿಯಲ್ಲು ಉದುರುತ್ತಿತ್ತು. ಪುಸ್ತಕ ಓದುತ್ತಿದ್ದಳು. ದೃಷ್ಟಿ ಹಾಯಿಸಿದಾಗ ಅದು ಹಿಂದಿಯದಾಗಿದ್ದು ಕಂಡು ಬಂತು. ಅಥವಾ ಮರಾಠಿಯೋ? ನಾನೂ ಏನಾದರೂ ಪುಸ್ತಕ ತರಬಹುದಾಗಿತ್ತೇನೋ? ಆದರೆ ಆಸ್ಪತ್ರೆಯಲ್ಲಿ ಎಂದೂ ನನಗೆ ಯಾವ ರೀತಿಯ ಸೀರಿಯಸ್ ರೀಡಿಂಗ್ ಸಾಧ್ಯವಾಗಿರಲಿಲ್ಲ. ಸ್ಟಾರ್ ಡಸ್ಟ್ ಅಥವಾ ವುಮೆನ್ಸ್ ಎರ ತರಬಹುದಾಗಿತ್ತು ಎನ್ನಿಸಿತು.

ಹೋಗಿ ಬರುವವರನ್ನು ನೋಡುತ್ತಾ ಕೂತು ಟೈಮ್ ನೋಡಿಕೊಂಡಾಗ ಕಾಲುಗಂಟೆ ಕಳೆದಿತ್ತು. ನನ್ನ ಪಕ್ಕದವಳು ಏಕೋ ಕಷ್ಟಪಡುತ್ತಿದ್ದಳು. ಮತ್ತೆ ಮತ್ತೆ ಗಡಿಯಾರದತ್ತ ಕಣ್ಣು ಹಾಯಿಸಿದಳು. ಪುಸ್ತಕ ಮುಚ್ಚಿ ತೆಗೆದು ಮಾಡುತ್ತಿದ್ದಳು. ಕೊನೆಗೆ ಅದನ್ನೆತ್ತಿ ಹ್ಯಾಂಡ್ ಬ್ಯಾಗ್ ನಲ್ಲಿಟ್ಟು ತಟ್ಟನೆ ನನ್ನತ್ತ ತಿರುಗಿ, "ನೀವು ನಾನಾದ ಮೇಲೆ ಬಂದವರಲ್ವಾ? ಎಂದಳು. ಹೌದೆಂದು ತಲೆ ಹಾಕಿದೆ.

ಇದುವರೆಗೂ ಅವಳ ಮುಖದ ಬಲಭಾಗ ಮಾತ್ರ ಕಾಣುತ್ತಿದ್ದುದು ಈಗ ಅವಳು ತಿರುಗಿ ನೋಡಿದಾಗ ಪೂರ್ತಿ ಕಂಡಿತು. ಎಲ್ಲೋ ಬಲ್ಬು ಹತ್ತಿತು. ಎಂದೋ ಪರಿಚಯವಿದ್ದಂಥಾ ಮುಖ, ಕಣ್ಣುಗಳು. ತುಂಬಾ ಸಲ ನೋಡಿದ್ದಂತೆ... ಆ ಕಣ್ಣುಗಳನ್ನು ಎಲ್ಲಿ ನೋಡಿದ್ದೆ? ಎಲ್ಲಿ? ಆದರೆ, ಆ ಕಣ್ಣುಗಳಿದ್ದ ಮುಖ.... ನಾನು ನೋಡಿದ್ದ ಮುಖ.... ಇನ್ನೂ ಕೋಲುಕೋಲಾಗಿತ್ತು. ಮೇಕಪ್ಪು ರಹಿತವಾಗಿತ್ತು. ಹಣೆಯ ಮೇಲೆ ತಿಲಕದ ಬದಲು ದೊಡ್ಡ ಗುಂಡು ಕುಂಕುಮವಿತ್ತು. ಕತ್ತಿರಿಸಿದ ಕುರುಳುಗಳು ಹಣೆಯ ಮೇಲೆ ಹಾರಾಡುತ್ತಿರಲಿಲ್ಲ. ನೀಟಾಗಿ ಪಟ್ಟೆಂದು ಬಾಚಿದ್ದ ಕೂದಲು ಮೊಣಕಾಲವರೆಗೂ ಇಳಿದ ಒಂದು ಜಡೆಯಾಗಿತ್ತು. ಲೋಲಾಕುಗಳ ಜಾಗದಲ್ಲಿ ಚಿನ್ನದೋಲೆಗಳಿದ್ದವು. ಕತ್ತಿನಲ್ಲಿ ಮುತ್ತಿನ ಸರವಿರಲಿಲ್ಲ. ಬರೀ ಕರಿಮಣಿಯಿತ್ತು. ಎಲ್ಲಿ?

"ನಿಮಗೆ ನನ್ನ ಗುರುತು ಸಿಕ್ಕಲಿಲ್ಲ?"

ನಾನು ಅನುಮಾನಿಸಿದ್ದನ್ನು ಕಂಡು ಅವಳು ಮೆಲುವಾಗಿ ನಕ್ಕಳು.

"ನಾನು... ವಿಮಲಾ"

ಆದರೆ ಅವಳ ಧ್ವನಿ ಮೊದಲಿನಂತೆಯೇ ಇತ್ತು.

ಆಗ ಬೂದುಬಣ್ಣದ ಪ್ಯಾಂಟು, ಬಿಳಿಶರಟಿನ ವ್ಯಕ್ತಿ ಇಬ್ಬರು ನರ್ಸ್ ಗಳೊಂದಿಗೆ ನಮ್ಮೆದುರಿಗೇ ಹಾದು ಓಡಿ ಓಪಿಡಿ ಕೋಣೆಯೊಳಗೆ ನಡೆದ.

"ಅರೆ, ಡಾಕ್ಟರ್ ಶ್ರೀರಾಮ್ ಅಲ್ಲಾ.... ಸದ್ಯ ಬಂದರು." ಅವಳೆಂದಳು. ನಾನು ಸುಮ್ಮನಿದ್ದುದನ್ನು ಕಂಡು "ಡಾಕ್ಟರ್ ಶ್ರೀರಾಂ ತಾನೇ ಈಗ ಒಳಗೆ ಹೋಗಿದ್ದು?" ಎಂದು ಕೇಳಿದಳು.

"ಗೊತ್ತಿಲ್ಲ . ನಾನವರನ್ನೆಂದೂ ನೋಡಿಲ್ಲ" ಎಂದೆ.

"ನಿಮಗೇನಾಗಿದೆ ಮೈಗೆ ಸರಿಯಾಗಿಲ್ವ?" ಎಂದವಳೇ ನನ್ನ ಕಾಲರ್ ಗಮನಿಸಿ "ಓ, ಸ್ಪಾಂತುಲೈಸಿಸ್" ಎಂದಳು.

"ನಿಮಗೆ..."

"ಮೊನ್ನೆ ಬಸ್ಸಿನಿಂದ ಇಳಿಯುವಾಗ ಬಿದ್ದೆ. ಮಂಡಿಗೆ ಪೆಟ್ಟಾಗಿತ್ತು. ನೋವು ಕಡಿಮೆ ಆಗ್ತಾನೇ ಇಲ್ಲ... ತೋರಿಸಿಕೊಂಡು ಹೋಗೋಣಾಂತ ಬಂದೆ."

ಅವಳು ಮತ್ತೆ ವಾಚ್ ನೋಡಿಕೊಂಡಳು. "ಇವರೆಲ್ಲಾ ನನಗೆ ಮುಂಚೇನೇ ಬಂದಿದ್ರು" ಸುತ್ತಮುತ್ತಲಿನ ೮-೧೦ ಜನರನ್ನು ತೋರಿಸುತ್ತಾ ಹೇಳಿದಳು. "ನನ್ನ ಕರೆಯೋಕೆ ಇನ್ನೂ ಒಂದು ಗಂಟೆಯಾದ್ರೂ ಆಗಬಹುದು". ಮತ್ತೆ ಕಾದಂಬರಿ ಹೊರಗೆ ತೆಗೆದಳು. ಓದುವ ಪ್ರಯತ್ನ ಮಾಡಿದಳು.

ಸಿಸ್ಟರ್ ಹೊರಗೆ ತಲೆಹಾಕಿ "ಮೋರೆ" ಎಂದು ಗಟ್ಟಿಯಾಗಿ ಕೂಗಿದಳು. "ಮೋರೆ..."

"ಹಾಂ... ಹಾಂ" ಎನ್ನುತ್ತಾ ನನ್ನ ಪಕ್ಕದ ಮುದುಕ ಎದ್ದ. ಎದುರಿಗೆ ನಿಂತಿದ್ದ ಹದಿ ಹರೆಯದ ಹುಡುಗಿ ಓಡಿಬಂದು ಅವನ ಕುರ್ಚಿಯ ಮೇಲೆ ಕೂತಳು. ಅವಳ ಹೆಬ್ಬೆರಳಿಗೆ ಮಾತ್ರ ಪ್ಲಾಸ್ಟರ್ ಇತ್ತು. ಮುಖ ಮಂದಹಾಸದಿಂದ ಮಿನುಗುತ್ತಿತ್ತು. ಪ್ರತಿ ಹೆಸರು ಕರೆದಾಗಲೂ ವಿಮಲ ಪುಸ್ತಕ ಮುಚ್ಚಿ ಒಂದು ಕ್ಷಣ ತಲೆ ಎತ್ತಿ ನೋಡುತ್ತಿದ್ದಳು. ಸ್ವಲ್ಪ ಹೊತ್ತು ಅನುಮಾನಿಸಿ ಮತ್ತೆ ಪುಟದ ಮೇಲೆ ಕಣ್ಣಾಡಿಸುತ್ತಿದ್ದಳು.

ಎಲ್ಲಿ ನೋಡಿದ್ದೆ ಅವಳನ್ನು? ಆ ಮುಖ. ಅದಕ್ಕೊಪ್ಪುವ ಕೆಂಪಂಚಿನ ನೀಲಿ ಸೀರೆ. ಹಿನ್ನೆಲೆಯಲ್ಲಿ ಏನಿತ್ತು? ವೀಡಿಯೋ ಕ್ಯಾಸೆಟ್ಟುಗಳು. ಹೌದು. ಸಾಲುಸಾಲಾಗಿ ಕಪಾಟಿನಲ್ಲಿ ಜೋಡಿಸಿಟ್ಟಿದ್ದ ವೀಡಿಯೋ ಕ್ಯಾಸೆಟ್ಟುಗಳು. ವೀಡಿಯೋ ಲೈಬ್ರರಿ, ವಿಮಲಾ ವೀಡಿಯೋ ಲೈಬ್ರರಿ. ಅದಕ್ಕೆ ಮೊದಲು, ಹಸಿರು ಪ್ಲಾಸ್ಟರಿನ ರೂಮಿನಲ್ಲಿ ಡಬಲ್ ಕಾಟಿನ ಮೇಲೆ ಬಣ್ಣಬಣ್ಣದ ಬ್ಲೌಸ್ಸ್ ಪೀಸುಗಳು. ಸೀರೆ ಫಾಲುಗಳು ನಡುವೆ ಕೂತ ಅವಳ ಮುಖದ ಹಿಂದೆ ಸರಿಯಾಗಿ ತೂಗುತ್ತಿದ್ದ ರಾಧಾಕೃಷ್ಣನ್ ಕ್ಯಾಲೆಂಡರ್. ತಾರೀಕಿನ ಭಾಗ ಹರಿದು ಹಾಕಿ ಚಿತ್ರ ಮಾತ್ರ ಮಿಗಿಸಿದ್ದ ಬಣ್ಣ ಬಣ್ಣದ ಕ್ಯಾಲೆಂಡರ್. ಅವಳು ನಾನು ಹೋದಾಗಲೆಲ್ಲಾ ಹಾಗೇ ಕೂತಿರುತ್ತಿದ್ದಳು. ಏನಾದರೂ ಒಳಗಿಂದ ತರಬೇಕಾದರೂ ಎದ್ದು ಹೋಗದೆ ಕೆಲಸದ ಹುಡುಗಿಯನ್ನು ಕರೆಯುತ್ತಿದ್ದಳು. "ಸಿಂಧೂ, ಆಂಟೀಗೆ ಕಿನಾರಾವಾಲಾ ಬ್ಲೌಸ್ ಪೀಸ್ ನೋಡಬೇಕಂತೆ, ಕಿಚನ್ ನಲ್ಲಿ ಕೆಂಪು ವಿಐಪಿ ಬ್ಯಾಗ್ ನಲ್ಲಿದೆ... ತಗೊಂಬಾ..."

ಅಲ್ಲಿಂದ ಏಳುತ್ತಿರಲಿಲ್ಲ. ಕೈಯಲ್ಲಿ ಚಿಟ್ಟೆಯ ಕ್ಲಿಪ್ ಹಿಡಿದು ಓಡಿ ಬಂದ ೬ ವರ್ಷದ ಮಗಳಿಗೆ ಅಲ್ಲೇ ಪೋನಿಟೈಲ್ ಕಟ್ಟಿ, ಮುಂದಲೆ ಬಾಚಿ, ಆ ಕ್ಲಿಪ್ ಹಾಕಿ ಕಳಿಸುತ್ತಿದ್ದಳು.

"ಲಂಚ್ ಬಾಕ್ಸ್ ಹಾಗೇ ತರಬೇಡ. ಸ್ಯಾಂಡ್ ವಿಚ್ ಮುಗಿಸದಿದ್ದರೆ ಸಂಜೆ ಪಾಪಿಸ್ನ್ ಸಿಗೋಲ್ಲ..." ಎಂದು ಎಚ್ಚರಿಸುತ್ತಾ, ಬ್ಲೌಸ್ ಪ್ಲೀಸ್ ಕೊಳ್ಳಬಂದವರೊಡನೆ ಅವಶ್ಯಕತೆ ಇದ್ದದ್ದಕ್ಕಿಂತ ಒಂದು ಪದ ಹೆಚ್ಚು ಮಾತಾಡುತ್ತಿರಲಿಲ್ಲ.

"ವಿಮಲಾ, ಮರೆತುಬಿಟ್ರಾ..." ಅವಳು ಮತ್ತೆ ಕೇಳಿದಳು.

"ಇಲ್ಲ ಇಲ್ಲ... ನೀನು.. ನಿನ್ನ ಲೈಬ್ರರಿ ಹೇಗೆ ನಡೀತಿದೇ? " ಅನುಮಾನಿಸುತ್ತಾ ಕೇಳಿದೆ. ನನ್ನ ನೆನಪು ಸರಿ ಇತ್ತೆಂದು ನನಗೆ ಖಾತ್ರಿ ಇರಲಿಲ್ಲ.

"ಅದನ್ನು ಮುಚ್ಚಿಬಿಟ್ಟೆ ಹೋದ ವರ್ಷಾನೇ. ನೀವು ಒಂದ್ಸಲ ಬಂದಿದ್ರೇನೋ ಅಷ್ಟೇ..."

"ಹೂಂ..."

"ಸಾಕಾಯ್ತು , ಸ್ವಲ್ಪ ಆರಾಮ ಮಾಡೋಣಾಂತ. ವಾರಪೂರ್ತಿ ಕೆಲಸ. ಸಂಡೇನೂ ರಜಾ ಇಲ್ಲ. ಬೇಜಾರು ಬಂತು. ಈಗ ತಪ್ಪದೆ ರಾಧಾಸ್ವಾಮಿ ಸತ್ಸಂಗಕ್ಕೆ ಹೋಗ್ತೀನಿ... ಇವತ್ತೂ ಹೋಗ್ಬೇಕು.. ಸ್ವಲ್ಪ ಶಾಂತಿ ಸಿಗುತ್ತೆ. ಕಾನ್ ಫಿಡೆನ್ಸ್ ಕೂಡ ಬಿಲ್ಡಪ್ ಮಾಡ್ಕೋಳ್ಳಾಣಾಂತ.... ನಾನು ಅಬ್ರಾಡ್ ಹೋಗ್ಬೇಕೂಂತ ಇದೀನಿ..."

ಧಡಧಡನೆ ಇಬ್ಬರು ವಾರ್ಡಬಾಯ್ ಗಳು ಖಾಲಿ ಸ್ಟ್ರೆಚರ್ ತೆಗೆದುಕೊಂಡು ಹೋದರು. ಇಬ್ಬರು ಹುಡುಗರು ಕಾರಿಡಾರಿನಲ್ಲೇ ಜೂಜಾಟ ಶುರು ಮಾಡಿದ್ದರು. ಒಬ್ಬನ ತಾಯಿ "ಶ್, ಇಲ್ಲಿ ಗಲಾಟೆ ಮಾಡಬಾರದು, ಓಡಿದರೆ ಆಂಟಿ ಬೈತಾರೆ" ಎಂದು ನನ್ನ ಕಡೆ ಬೆರಳು ತೋರಿಸಿದಳು.

ಆಗ ೬-೭ ಜನರ ಗುಂಪೊಂದು ಜೋರಾಗಿ ಗುಜರಾತಿಯಲ್ಲಿ ಮಾತಾಡಿಕೊಂಡು ಬಂದರು. ೩ ಜನ ಆರ್ಗೆಂಡಿ ಸೀರೆಯ ಹೆಂಗಸರು, ೩-೪ ಪೈಜಾಮಾ, ಕುರ್ತಾ ಗಂಡ್ಸರು, ಅವರು ಹಾಕಿಕೊಂಡಿದ್ದ ಪರ್ ಫ್ಯೂಮ್ ಗಪ್ಪನೆ ಎಲ್ಲಾ ಕಡೆ ಹರಡಿ, ಆಸ್ಪತ್ರೆ ವಾಸನೆಯನ್ನು ಮೀರಿತು. ಮಧ್ಯದಲ್ಲಿದ್ದ ಬಿಳಿ ಪಾಲಿಯೆಸ್ಟರ್ ಪೈಜಾಮಾ, ಕುರ್ತಾದವ ಕೆಂಪು ಗುಲಾಬಿಗಳ ದೊಡ್ಡ ಗೊಂಚಲೊಂದನ್ನು ಕೈಯಲ್ಲಿ ಹಿಡಿದಿದ್ದ. ಅಂದು ಮೆರಿನ್ ಡ್ರೈವ್ ಸಿಗ್ನಲ್ ನಲ್ಲಿ ಟ್ಯಾಕ್ಸಿ ನಿಂತಾಗ, "ಗುಲಾಬ್ ಲೇಲೋ" ಎಂದು ಕೆಂಪು ಗುಲಾಬಿಗಳ ಗುಚ್ಛವನ್ನು ಮುಖದ ಮುಂದೆ ಹಿಡಿದ ಕರೀ ಹುಡುಗನನ್ನು ದೂರ ಸರಿಸುತ್ತಾ ಶಾಂತಿ ಹೇಳಿದ್ದು ನೆನಪಾಯಿತು. "ನೋಡಿ, ಈ ಗುಲಾಬಿ ಗೊಂಛಲುಗಳನ್ನು ಎಲ್ಲಿಂದ ತರ್ತಾರೆ ಗೊತ್ತಾ ಫೈವ್ ಸ್ಟಾರ್ ಹೋಟೇಲ್ ಗಳಲ್ಲಿ. ದಿನಾ ಬೆಳಿಗ್ಗೆ ಫ್ರೆಶ್ ಪ್ಲವರ್ಸ್ ಇಡಬೇಕಲ್ಲಾ ರೂಮುಗಳಲ್ಲಿ.... ಆದ್ದರಿಂದ ಆರು ಒಂದು ದಿನ ಹಳೆಯದಾದ ಹೂಗಳನ್ನು ಎಸೀತಾರೆ.... ಇವರು ಅದನ್ನೆತ್ತಿಕೊಂಡು ಬಂದು ಮಾರ್ತಾರೆ. ೨೦ ರೂಪಾಯಿ ಕೊಡಬೇಡಿ ಡಜನ್ ಗೆ ಐದು ರೂಪಾಯಿಗೆ ಕೊಡ್ತಾರೆ.... ನಾನೊಂದು ಸಲ ೨ ರೂಪಾಯಿಗೆ ೧೦ ಹೂ ಕೊಂಡಿದ್ದೆ ಗೊತ್ತಾ" ಎಂದು ಕೆಳದನಿಯಲ್ಲಿ ಸೇರಿಸಿದ್ದಳು.

ಬ್ಲೌಸ್ ಪೀಸ್ ಮಾರುತ್ತಿದ್ದಾಗ ಎರಡು ಮೂರು ಬಾರಿ ಹೋಗಿರಬಹುದು ಅವಳ ಮನೆಗೆ. ಇದ್ದಕ್ಕಿದ್ದಂತೆ ದಿಢೀರನೆ ಬಂದಿಳಿಯುವ ನೆಂಟರು, ಮಂಗಳಗೌರಿ ಆಮಂತ್ರಣಗಳ ಸಮಯದಲ್ಲಿ ಏನು ಕೊಡಬೇಕು ತಿಳಿಯದೆ, ಹತ್ತಿರವೇ ಇದ್ದ ಅವಳ ಮನೆಯಿಂದ ಬ್ಲೌಸ್ ಪೀಸ್ ಕೊಂಡು ತರುವ ಅಭ್ಯಾಸವಾಗಿತ್ತು.

ಕೊನೆಯ ಸಲ ಹೋದಾಗಲಂತೂ ೬ ತಿಂಗಳ ಬಾಣಂತಿ. ಅದೇ ರಾಧಾಕೃಷನ ಕ್ಯಾಲೆಂಡರ್ ಮುಂದೆ ಕುಳಿತು, ತೊಡೆಯಲ್ಲಿ ಮಗುನ್ನಿಟ್ಟುಕೊಂಡೇ ಮಾತಾಡಿದ್ದಳು.

"ಯಾವ ಟೈಪ್ ಬೇಕು? ಟೂಬೈಟೂ, ಪಾಲಿಯೆಸ್ಟರ್, ಕಂಚಿ ಕಾಟನ್.... ಇದಕ್ಕೆ ನೋಡಿ ೩೦ ರೂಪಾಯಿ..."

ಎರಡು ಬ್ಲೌಸ್ ಪೀಸ್ ಕೊಂಡು ಹೊರಡುವ ಮುಂಚೆ ಕೇಳಿದ್ದೆ.

"ಮಗುವಿನ ಹೆಸರೇನು?"

"ಗಿರೀಶ್"

"ಚಿಕ್ಕ ಮಗೂನ ಸಂಭಾಳಿಸಿಕೊಂಡು, ಮನೆ ಕೆಲಸಾನೂ... ಕಷ್ಟ ಅಲ್ಲ?"

"ಹಾಗೇನಿಲ್ಲ, ಒಳ್ಳೆ ಹುಡುಗ ಇವನು."

ಕೇಳಿದ ಪ್ರಶ್ನೆಗೆ ಉತ್ತರ ಅಷ್ಟೇ.

ಹೊರನಡೆದಾಗ ಅವಳ ತೊಡೆಯ ತುಂಬಾ ಮಲಗಿದ್ದ ಮಗು ನಿದ್ರಿಸುತ್ತಿತ್ತು. ಮಂಚದ ಪಕ್ಕದಲ್ಲಿಟ್ಟಿದ್ದ ತೊಟ್ಟಲಿಗೆ ಕಟ್ಟಿದ ಬಣ್ಣ ಬಣ್ಣದ ಪಕ್ಷಿಗಳು, ಕಿರುಗಂಟೆಗಳು ಫ್ಯಾನ್ ಗಾಳಿಗೆ ತೂಗುತ್ತಾ ಮೆಲುದನಿ ಮಾಡುತ್ತಿದ್ದವು.

ಅವಳು ಮತ್ತೆ ವಾಚ್ ನೋಡಿಕೊಂಡಳು.

"ನನಗೆ ಸ್ವಲ್ಪ ಹೆಲ್ಪ್ ಮಾಡ್ತೀರಾ" ಎಂದು ಕೇಳಿದಳು.

"ಏನು?"

"ನನ್ನ ಹೆಸರು ಕೂಗಿದರೆ ಇಲ್ಲೇ ಸೈಕಿಯಾಟ್ರಿ ಓಪಿಡಿಗೆ ಹೋಗಿದೀನೀಂತ ಹೇಳಿ. ಅಲ್ಲಿ ಫೈಲು ತೆಗೆಸಿ ಸಿಸ್ಟರ್ ಗೆ ಹೇಳಿ ಒಂದು ನಿಮಿಷದಲ್ಲಿ ಬಂದು ಬಿಡ್ತೀನಿ.ಇಲ್ಲದಿದ್ರೆ ತುಂಬಾ ಲೇಟಾಗುತ್ತೆ".

ಎದ್ದು ಬೇಗ ಬೇಗ ನಡೆದು ಹೋದಳು. ಅವಳ ದಢೂತಿ ದೇಹ ಹೈಹೀಲ್ಡ್ ಚಪ್ಪಲಿಯ ಮೇಲೆ ತೂಗುತ್ತಿತ್ತು.

೫ ನಿಮಿಷಗಳಲ್ಲಿ ಮರಳಿ ಬಂದಳು.

"ಅಲ್ಲೂ ಅಪಾಯಂಟ್ ಮೆಂಟ್ ಇದೆ ನಂದು".

ನನ್ನ ಪ್ರಶ್ನೆಗಾಗಿ ಕಾದಳು. ಅದು ಬರದಾಗ ಮುಂದುವರೆಸಿದಳು. "ನನಗಾಗಿ ಅಲ್ಲ. ನಾನು ಸರಿಯಾಗಿದೀನಿ. ನನ್ನ ಮಿಸ್ಟರ್ ಗಾಗಿ"

"ಓ, ಮೈಲಿ ಸರಿಯಾಗಿಲ್ಲವೇನು?" ಏನು ಹೇಳಬೇಕೋ ತೋಚದೆ ಕೇಳಿದೆ.

"ಈಗಿಂದಲ್ಲ, ಹತ್ತು ವರ್ಷದ ಕತೆ. ಅಷ್ಟು ವರ್ಷದಿಂದಾನೂ ಇವರು ಸೈಕೋನೇ.... ಸುಮ್ಮನೆ ತಿಂಗಳಿಗೆರಡು ಸಲ ಬರೋದು....ಮಾತಾಡೋದು... ಔಷಧಿ ತಗೊಂಡು ಹೋಗೋದು. ಏನೂ ಪ್ರಯೋಜನ ಇಲ್ಲ".

ಇಲ್ಲಿನ ಸೈಕಿಯಾಟ್ರಿ ಡಿಪಾರ್ಟ್ಮೆಂಟಿಗೆ ಅಂಥಾ ಒಳ್ಳೆ ಹೆಸರೇನೂ ಇರಲಿಲ್ಲ.

"ಇನ್ನೆಲ್ಲಾದರೂ ಹೊರಗೆ ತೋರಿಸಿದ್ದೀರಾ?" ನಾನು ಅನುಮಾನಿಸುತ್ತಾ ಕೇಳಿದೆ.

"ಹೂಂ ಪ್ರೈವೇಟ್ನಲ್ಲೇ ತೋರಿಸ್ತಿದ್ವಿ, ದಾದರ್ ನಲ್ಲಿದಾರಲ್ಲಾ ಡಾಕ್ಟರ್ ಮಿಸ್ತ್ರಿ. ತುಂಬಾ ಒಳ್ಳೆ ಡಾಕ್ಟರ್ ಅವರು . ತಿಂಗಳಿಗೆ ಒಂದೆರಡು ಸಾವಿರ ಬಿಲ್ ಬರೋದು. ಈಗ ನಾನು ಬಿಸಿನೆಸ್ ಬಂದ್ ಮಾಡಿದ ಮೇಲೆ ಅದೆಲ್ಲಾ ಸಾಧ್ಯ ಇಲ್ಲ. ಇವರಿಗೆ ಕೈಗೆ ಬರೋದು ನಾಲ್ಕು ಸಾವಿರ ಅಷ್ಟೆ. ಹತ್ತನೇ ತಾರೀಕಿಗೆ ಮುಗಿಯುತ್ತೆ. ಏನು ಮಾಡೋದು, ಗೌವರ್ನ್ ಮೆಂಟ್ ಜಾಬ್ ಆದ್ದರಿಂದ ಕೆಲಸದಿಂದ ಕಿತ್ತು ಹಾಕಿಲ್ಲ. ಅಷ್ಟೇ..."

"....ಲಾ" ನರ್ಸ್ ಕೂಗಿ ಒಳಗೆ ಹೋದಳು.

ಅವಳು ಧಡಕ್ಕನೆ ಎದ್ದು ಒಳಗೆ ಹೋದಳು. ಮರು ನಿಮಿಷದಲ್ಲೇ ವಾಪಸ್ಸು ಬಂದಳು.

"ಲೀಲಾ ಅಂತೆ. ಇವರು ಕೂಗೋ ರೀತಿ ನೋಡಿ. ಏನೂ ಗೊತ್ತಾಗೋಲ್ಲ"

"ಏನ್ಹೇಳ್ತಿದ್ದೆ... ಹಾಂ, ನಂಗೆ ಚೆನ್ನಾಗಿ ಖರ್ಚು ಮಾಡಿ ಅಭ್ಯಾಸ. ಸಂಪಾದಿಸುತ್ತಿದ್ನಲ್ಲಾ. ಈಗ ತುಂಬಾ ಕಷ್ಟ. ಏನ್ಮಾಡೋದು ಅದಕ್ಕೆ ಅಬ್ರಾಡ್ ಟ್ರೈ ಮಾಡ್ತಿದ್ದೀನಿ".

"ಏನ್ಮಾಡ್ಬೇಕೂಂತ."

"ನನಗೆ ಮಾರ್ಕೆಟಿಂಗ್ ಎಕ್ಸ್ ಪೀರಿಯನ್ಸ್ ಇದೆಯಲ್ಲಾ. ಅದಕ್ಕೆ ಏಜೆಂಟ್ ಗಳಿಗೆ ಹೇಳಿದೀನಿ. ತುಂಬಾ ಡಿಮ್ಯಾಂಡ್ ಇದೆ. ದುಬೈಯಲ್ಲಂತೂ ಎಲ್ಲಾ ಏರ್ಪಾಟಾಗಿದೆ. ಬಿಸಿನೆಸ್ ರನ್ ಮಾಡಿ ಅಭ್ಯಾಸ ಆಗಿದೆಯಲ್ಲಾ, ನಂಗೆ ಅಲ್ಲಿ ಕೆಲಸ ಮಾಡೋದು ಸುಲಭಾನೇ ಆಗುತ್ತೆ. ತಿಂಗಳಲ್ಲಿ ಹೋಗಬಹುದು."

"ಹೂಂ..."

"ಈ ಗವರ್ನ್ ಮೆಂಟ್ ಆಸ್ಪತ್ರೇಲಿ ಸುಮ್ಮನೆ ದವಾ ಕೊಡ್ತಾರೆ. ಪ್ರೈವೇಟ್ನಲ್ಲಿ ಹಾಗಲ್ಲ ನೋಡಿ. ಚೆನ್ನಾಗಿ ಮಾತಾಡ್ತಾರೆ... ಕಷ್ಟ ಸುಖ ಕೇಳ್ತಾರೆ.... ದಾದರ್ ಡಾಕ್ಟರ್ ಉಂಬಾ ಒಳ್ಳೆಯವರಿದ್ರು..."

"ಹೌದು, ಕಷ್ಟ" ಎಂದೆ. ಇನ್ನೇನೂ ಹೇಳಲು ತಿಳಿಯದೆ.

"ಕಷ್ಟ ಇರಲಿ, ಮುಖ್ಯವಾಗಿ ನಮ್ಮನ್ನ ಗೋಳು ಹುಯ್ಕೋತಾರೆ. ನನ್ನನ್ನ ಮಕ್ಕಳನ್ನ ಗಿಲ್ಟಿಯಾಗಿ ಫೀಲ್ ಮಾಡಿಸಿಬಿಟ್ರೆ ಇವರ ಕೆಲಸ ಮುಗೀತು. ನನ್ನ ಮಿಸ್ಟರ್ ೧೦-೧೫ ವರ್ಷದಿಂದ ಸೈಕೋನೇ. ಆದರೆ ಸುಮ್ಮನೆ ನಮ್ಮ ತಪ್ಪೊಂದ್ರು, ನಮಗೆ ಸರಿ ಮಾಡ್ಕೋಳ್ಳಿ ಅಂದ್ರು ಕಾಯಿಲೆ ಇರೋದು ಅವರಿಗೆ ತಾನೇ. ನಾನೇನು ಮಾಡ್ಬೇಕು ಹೇಳಿ".

"ಹೂಂ..."

"ಅವರಿಂದ ನನ್ನ ತಲೆಮೇಲೆ ಭಾರ ಹೆಚ್ಚಾಗ್ತಿದೆ. ನಾನು ಅಬ್ರಾಡ್ ಹೋದರೆ ಬೇಕಾದಷ್ಟು ಹಣ ಮಾಡಬಹುದು ನೋಡಿ. ಆಮೇಲೆ ನಾನು ಒಳ್ಳೆ ಪ್ರೈವೇಟ್ನಲ್ಲಿ ಇವರಿಗೆ ಟ್ರೀಟ್ ಮೆಂಟ್ ಕೊಡಿಸಬಹುದು."

"ವಿಮಲಾ, ವಿಮಲಾ ಕೋನ್ ಹೈ" ನರ್ಸ್ ಕೂಗಿದಳು.

"ಹಾಂ" ಎನ್ನುತ್ತಾ ಅವಳು ಎದ್ದು ಹೋದಳು.

ಐದು ನಿಮಿಷದಲ್ಲಿ ಹೊರಗೆ ಬಂದು ನನ್ನೆದುರಿಗೆ ನಿಂತಳು. "ನಾನಿನ್ನು ಬರ್ತೀನಿ. ಅಲ್ಲಿ ಎಷ್ಟು ಹೊತ್ತಾಗುತ್ತೋ ಗೊತ್ತಿಲ್ಲ" ಎಂದಳು.

"ಅಂದ ಹಾಗೆ, ನಿಮ್ಮ ಮಗಳು, ಮಗ... ಇಷ್ಟೇ ಇದ್ರಲ್ಲಾ, ತುಂಬಾ ಚಿಕ್ಕೋರು ನಾನು ನಿಮ್ಮನೇಗೆ ಬರ್ತಿದ್ದಾಗ... ಈಗೇನು ಮಾಡ್ತಿದ್ದಾರೆ?"

ಅವಳ ಕಣ್ಣುಗಳು ಬದಲಾದವು. ತಟ್ಟನೆ ತಲೆ ತಗ್ಗಿಸಿದಳು. "ಅವಳು... ಅವಳು... ನಮ್ಮ ಜೊತೆ ಇಲ್ಲ... ಅವಳು... ಅದೊಂದು ದೊಡ್ಡ ಕತೆ, ಇನ್ನೊಂದು ದಿನ ಹೇಳ್ತೀನಿ. ನನ್ನ ಮಗ ಚೆನ್ನಾಗಿದ್ದಾನೆ. ಚೆನ್ನಾಗಿ ಓದ್ತಾನೆ. ಕ್ಲಾಸಲ್ಲಿ ಫಸ್ಟ್ ಬರ್ತಾನೆ. ಮುಂದಿನ ವರ್ಷ ಅವನನ್ನು ಹಾಸ್ಟೆಲ್ ನಲ್ಲಿ ಹಾಕೋಣಾಂತ ಇದೇನಿ" ಎಂದವಳೇ ಮತ್ತೊಮ್ಮೆ ವಾಚ್ ನೋಡಿಕೊಂಡು ಅಲ್ಲಿಂದ ಸೈಕಿಯಾಟ್ರಿ ಓಪಿಡಿ ಕಡೆ ನಡೆದಳು.

ಶ್ರೀನಿವಾಸ "ಕಮಲಾ ಶ್ರೀನಿವಾಸ" ಸಿಸ್ಟರ್ ಕೂಗಿದಳು. ನಾನೆದ್ದು ಒಳಗೆ ಹೋದೆ. ಅಲ್ಲಿಂದ ಮತ್ತೆ ಎಕ್ಸರೇ ತೆಗೆಸಿ ಹೊರಬೀಳುವ ಹೊತ್ತಿಗೆ ಇನ್ನೊಂದು ಗಂಟೆ ಕಳೆದಿತ್ತು. ಆಸ್ಪತ್ರೆಯ ಹೊರಗೆ ಬಂದು ರಿಕ್ಷಾಗಾಗಿ ಕಣ್ಣಾಡಿಸುತ್ತಿದ್ದಾಗ, ಅವಳು ಸ್ವಲ್ಪ ದೂರದಲ್ಲೇ ರಿಕ್ಷಾ ಹತ್ತುತ್ತಿದ್ದಳು.

"ಬರ್ತೀರಾ ನಂಜೊತೆ, ನಿಮ್ಮನ್ನು ಕಾರ್ನರ್ ನಲ್ಲಿ ಡ್ರಾಪ್ ಮಾಡ್ತೀನಿ. ನೀವಿನ್ನೂ ಅಮರ್ ವಿಲ್ಲಾದಲ್ಲೇ ಇದ್ದೀರಲ್ಲಾ...." ಎಂದಳು. ನಾನು ರಿಕ್ಷಾ ಹತ್ತಿದೆ. ಖಟಖಟನೆ ಶಬ್ದ ಮಾಡುತ್ತಾ ರಿಕ್ಷಾ ಹೊರಟಿತು.

ದಾರಿಯಲ್ಲಿ ಅವಳು ಪೂರ್ತಿ ಮೌನವಾದಳು. ಒಂದು ಮಾತೂ ಆಡಲಿಲ್ಲ. ಅವಳ ದೃಷ್ಟಿ ನೇರವಾಗಿ ಎದುರಿನ ರಸ್ತೆಯ ಮೇಲಿತ್ತು. ಪಕ್ಕದಿಂದ ಅವಳು ಈಗ ಹೆಚ್ಚು ಮೊದಲಿದ್ದಂತೆ ಕಂಡಳು.

ಟ್ರಾಫಿಕ್ ಸಿಗ್ನಲ್ ನಲ್ಲಿ ರಿಕ್ಷಾ ನಿಂತಾಗ ಹರಕು ಚಡ್ಡಿಯ ಮೂಳೆ ಹುಡುಗನೊಬ್ಬ "ಗುಲಾಬ್ ಲೇಲೋ ಬಾಯಿ, ಗುಲಾಬ್ ಲೇಲೋ" ಎಂದು ಕೆಂಪು ಗುಲಾಬಿಗಳ ಗೊಂಚಲೊಂದನ್ನು ಮುಖಕ್ಕೆ ಹಿಡಿದ.

ಅವಳು ಅದರ ಬೆಲೆ ಎಷ್ಟೆಂದೂ ಕೇಳದೆ, ಐದು ರೂಪಾಯಿ ನೋಟೊಂದನ್ನು ಅವನ ಕೈಯಲ್ಲಿ ತುರುಕಿ, ಗುಲಾಬಿಯ ಗೊಂಚಲು ತೆಗೆದುಕೊಂಡು ತೊಡೆಯ ಮೇಲಿಟ್ಟುಕೊಂಡಳು.

ನನ್ನ ಮನೆಯ ತಿರುವಿನತ್ತ, ರಿಕ್ಷಾ ನಿಲ್ಲಿಸಲು ನಾನೇ ಹೇಳಿದೆ. "ಥ್ಯಾಂಕ್ಯೂ" ಎಂದು ಹೇಳಿ ಇಳಿದಾಗ ಅವಳು ಉತ್ತರ ಕೊಡಲಿಲ್ಲ.

ಸ್ವತಂತ್ರ ಭಾರತಕ್ಕಾಗಿ ಮೊದಲ ಯುದ್ಧ

ಭಾರತೀಯ ದಂಗೆಯನ್ನು ಸಿಪಾಯಿ ದಂಗೆ ಅಥವಾ ಮೊದಲ ಸ್ವಾತಂತ್ರ್ಯ ಸಂಗ್ರಾಮ ಎಂದೂ ಕರೆಯುತ್ತಾರೆ, 1857-59ರಲ್ಲಿ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ವ್ಯಾಪಕ ಆದರೆ ವಿಫಲ ದಂಗೆ. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿ ಭಾರತೀಯ ಪಡೆಗಳಿಂದ (ಸಿಪಾಯಿಗಳು) ಮೀರತ್‌ನಲ್ಲಿ ಪ್ರಾರಂಭವಾಯಿತು, ಇದು ದೆಹಲಿ, ಆಗ್ರಾ, ಕಾನ್ಪುರ ಮತ್ತು ಲಕ್ನೋಗೆ ಹರಡಿತು. ಭಾರತದಲ್ಲಿ ಇದನ್ನು ಸಾಮಾನ್ಯವಾಗಿ ಮೊದಲ ಸ್ವಾತಂತ್ರ್ಯ ಸಂಗ್ರಾಮ ಮತ್ತು ಇತರ ರೀತಿಯ ಹೆಸರುಗಳು ಎಂದು ಕರೆಯಲಾಗುತ್ತದೆ.

ಹಿನ್ನೆಲೆ:

ದಂಗೆಯನ್ನು ಕೇವಲ ಸಿಪಾಯಿ ದಂಗೆ ಎಂದು ಪರಿಗಣಿಸುವುದೆಂದರೆ ಅದಕ್ಕೆ ಕಾರಣವಾಗುವ ಮೂಲ ಕಾರಣಗಳನ್ನು ಕಡಿಮೆ ಅಂದಾಜು ಮಾಡುವುದು. ಬ್ರಿಟಿಷ್ ಪರಮಾಧಿಕಾರ-ಅಂದರೆ, ಭಾರತೀಯ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಬ್ರಿಟಿಷರ ಪ್ರಾಬಲ್ಯದ ನಂಬಿಕೆಯನ್ನು ಭಾರತದಲ್ಲಿ ಸುಮಾರು 1820 ರಲ್ಲಿ ಪರಿಚಯಿಸಲಾಯಿತು. ಬ್ರಿಟಿಷರು ಹಿಂದೂ ರಾಜಪ್ರಭುತ್ವದ ರಾಜ್ಯಗಳ ಮೇಲೆ ಹಿಡಿತ ಸಾಧಿಸಲು ವಿವಿಧ ತಂತ್ರಗಳನ್ನು ಬಳಸಿದರು. ಬ್ರಿಟಿಷರೊಂದಿಗೆ ಅಂಗಸಂಸ್ಥೆ ಮೈತ್ರಿಗಳು. ಎಲ್ಲೆಡೆ ಹಳೆಯ ಭಾರತೀಯ ಶ್ರೀಮಂತರನ್ನು ಬ್ರಿಟಿಷ್ ಅಧಿಕಾರಿಗಳು ಬದಲಾಯಿಸುತ್ತಿದ್ದರು. ಒಂದು ಗಮನಾರ್ಹವಾದ ಬ್ರಿಟಿಷ್ ತಂತ್ರವನ್ನು ಡಾಕ್ಟ್ರಿನ್ ಆಫ್ ಲ್ಯಾಪ್ಸ್ ಎಂದು ಕರೆಯಲಾಯಿತು, ಇದನ್ನು ಮೊದಲು 1840 ರ ದಶಕದ ಉತ್ತರಾರ್ಧದಲ್ಲಿ ಲಾರ್ಡ್ ಡಾಲ್ಹೌಸಿ ನಿರ್ವಹಿಸಿದರು. ಇದು ಬ್ರಿಟಿಷರು ಸ್ವಾಭಾವಿಕ ಉತ್ತರಾಧಿಕಾರಿಯಿಲ್ಲದ ಹಿಂದೂ ಆಡಳಿತಗಾರನನ್ನು ಉತ್ತರಾಧಿಕಾರಿಯನ್ನು ದತ್ತು ತೆಗೆದುಕೊಳ್ಳುವುದನ್ನು ನಿಷೇಧಿಸುವುದನ್ನು ಒಳಗೊಂಡಿತ್ತು ಮತ್ತು ಆಡಳಿತಗಾರನು ಮರಣಹೊಂದಿದ ನಂತರ ಅಥವಾ ತ್ಯಜಿಸಿದ ನಂತರ ಅವನ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಆ ಸಮಸ್ಯೆಗಳಿಗೆ ಬ್ರಾಹ್ಮಣರ ಹೆಚ್ಚುತ್ತಿರುವ ಅಸಮಾಧಾನವನ್ನು ಸೇರಿಸಬಹುದು, ಅವರಲ್ಲಿ ಅನೇಕರು ತಮ್ಮ ಆದಾಯದಿಂದ ಹೊರಹಾಕಲ್ಪಟ್ಟಿದ್ದಾರೆ ಅಥವಾ ಲಾಭದಾಯಕ ಸ್ಥಾನಗಳನ್ನು ಕಳೆದುಕೊಂಡಿದ್ದಾರೆ.

ಮತ್ತೊಂದು ಗಂಭೀರ ಕಾಳಜಿಯು ಪಾಶ್ಚಾತ್ಯೀಕರಣದ ಹೆಚ್ಚುತ್ತಿರುವ ವೇಗವಾಗಿದೆ, ಪಾಶ್ಚಿಮಾತ್ಯ ವಿಚಾರಗಳ ಪರಿಚಯದಿಂದ ಹಿಂದೂ ಸಮಾಜವು ಪ್ರಭಾವಿತವಾಗುತ್ತಿದೆ. ಮಿಷನರಿಗಳು ಹಿಂದೂಗಳ ಧಾರ್ಮಿಕ ನಂಬಿಕೆಗಳಿಗೆ ಸವಾಲು ಹಾಕುತ್ತಿದ್ದರು. ಮಾನವೀಯ ಆಂದೋಲನವು ರಾಜಕೀಯ ಮೇಲ್ವಿಚಾರಕ್ಕಿಂತ ಆಳವಾಗಿ ಹೋದ ಸುಧಾರಣೆಗಳಿಗೆ ಕಾರಣವಾಯಿತು. ಭಾರತದ ಗವರ್ನರ್-ಜನರಲ್ ಆಗಿ (1848-56) ಅವರ ಅಧಿಕಾರಾವಧಿಯಲ್ಲಿ, ಲಾರ್ಡ್ ಡಾಲ್ಹೌಸಿಯು ಮಹಿಳೆಯರ ವಿಮೋಚನೆಗಾಗಿ ಪ್ರಯತ್ನಗಳನ್ನು ಮಾಡಿದರು ಮತ್ತು ಹಿಂದೂ ವಿಧವೆಯರ ಮರುವಿವಾಹಕ್ಕೆ ಎಲ್ಲಾ ಕಾನೂನು ಅಡೆತಡೆಗಳನ್ನು ತೆಗೆದುಹಾಕಲು ಮಸೂದೆಯನ್ನು ಪರಿಚಯಿಸಿದರು. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡವರು ಕುಟುಂಬದ ಆಸ್ತಿಯಲ್ಲಿ ತಮ್ಮ ಹಿಂದೂ ಸಂಬಂಧಿಕರೊಂದಿಗೆ ಹಂಚಿಕೊಳ್ಳಬೇಕಾಗಿತ್ತು. ಬ್ರಿಟಿಷರು ಜಾತಿ ವ್ಯವಸ್ಥೆಯನ್ನು ಒಡೆಯುವ ಗುರಿಯನ್ನು ಹೊಂದಿದ್ದರು ಎಂಬ ವ್ಯಾಪಕ ನಂಬಿಕೆ ಇತ್ತು. ಪಾಶ್ಚಿಮಾತ್ಯ ಶಿಕ್ಷಣ ವಿಧಾನಗಳ ಪರಿಚಯವು ಹಿಂದೂ ಮತ್ತು ಮುಸ್ಲಿಂ ಎರಡೂ ಸಾಂಪ್ರದಾಯಿಕತೆಗೆ ನೇರ ಸವಾಲಾಗಿತ್ತು.

ಬಂಗಾಳದ ಸೈನ್ಯದಲ್ಲಿ ದಂಗೆ ಭುಗಿಲೆದ್ದಿತು ಏಕೆಂದರೆ ಭಾರತೀಯರು ಸಂಘಟಿತರಾಗಿರುವುದು ಮಿಲಿಟರಿ ಕ್ಷೇತ್ರದಲ್ಲಿ ಮಾತ್ರ. ದಂಗೆಯ ನೆಪವು ಹೊಸ ಎನ್‌ಫೀಲ್ಡ್ ರೈಫಲ್‌ನ ಪರಿಚಯವಾಗಿತ್ತು. ಅದನ್ನು ಲೋಡ್ ಮಾಡಲು, ಸಿಪಾಯಿಗಳು ಲೂಬ್ರಿಕೇಟೆಡ್ ಕಾರ್ಟ್ರಿಜ್‌ಗಳ ತುದಿಗಳನ್ನು ಕಚ್ಚಬೇಕಾಗಿತ್ತು. ಕಾಟ್ರಿಡ್ಜ್‌ಗಳನ್ನು ನಯಗೊಳಿಸಲು ಬಳಸುವ ಗ್ರೀಸ್ ಹಂದಿಗಳು ಮತ್ತು ಹಸುಗಳ ಕೊಬ್ಬಿನ ಮಿಶ್ರಣವಾಗಿದೆ ಎಂದು ಸಿಪಾಯಿಗಳಲ್ಲಿ ವದಂತಿ ಹರಡಿತು; ಹೀಗಾಗಿ, ಅದರೊಂದಿಗೆ ಮೌಖಿಕ ಸಂಪರ್ಕವನ್ನು ಹೊಂದುವುದು ಮುಸ್ಲಿಮರಿಗೆ ಮತ್ತು ಹಿಂದೂಗಳಿಗೆ ಅವಮಾನವಾಗಿದೆ. ಪ್ರಶ್ನೆಯಲ್ಲಿರುವ ಯಾವುದೇ ಕಾರ್ಟ್ರಿಜ್‌ಗಳಲ್ಲಿ ಈ ಎರಡೂ ವಸ್ತುಗಳನ್ನು ವಾಸ್ತವವಾಗಿ ಬಳಸಲಾಗಿದೆ ಎಂಬುದಕ್ಕೆ ಯಾವುದೇ ನಿರ್ಣಾಯಕ ಪುರಾವೆಗಳಿಲ್ಲ. ಆದಾಗ್ಯೂ, ಕಾರ್ಟ್ರಿಜ್‌ಗಳು ಕಳಂಕಿತವಾಗಿವೆ ಎಂಬ ಗ್ರಹಿಕೆಯು ಬ್ರಿಟಿಷರು ಭಾರತೀಯ ಸಾಂಪ್ರದಾಯಿಕ ಸಮಾಜವನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ದೊಡ್ಡ ಅನುಮಾನವನ್ನು ಹೆಚ್ಚಿಸಿತು. ಅವರ ಪಾಲಿಗೆ, ಬ್ರಿಟಿಷರು ಬೆಳೆಯುತ್ತಿರುವ ಸಿಪಾಯಿ ಅಸಮಾಧಾನದ ಬಗ್ಗೆ ಸಾಕಷ್ಟು ಗಮನ ಹರಿಸಲಿಲ್ಲ.

ಮಂಗಲ್ ಪಾಂಡೆ: ಮಾರ್ಚ್ 1857 ರ ಅಂತ್ಯದಲ್ಲಿ ಮಂಗಲ್ ಪಾಂಡೆ ಎಂಬ ಸಿಪಾಯಿ ಬ್ಯಾರಕ್‌ಪೋರ್‌ನ ಮಿಲಿಟರಿ ಗ್ಯಾರಿಸನ್‌ನಲ್ಲಿ ಬ್ರಿಟಿಷ್ ಅಧಿಕಾರಿಗಳ ಮೇಲೆ ದಾಳಿ ಮಾಡಿದ. ಅವರನ್ನು ಏಪ್ರಿಲ್ ಆರಂಭದಲ್ಲಿ ಬ್ರಿಟಿಷರು ಬಂಧಿಸಿ ನಂತರ ಗಲ್ಲಿಗೇರಿಸಿದರು. ನಂತರ ಏಪ್ರಿಲ್‌ನಲ್ಲಿ ಮೀರತ್‌ನಲ್ಲಿನ ಸಿಪಾಯಿ ಸೈನಿಕರು ಎನ್‌ಫೀಲ್ಡ್ ಕಾರ್ಟ್ರಿಡ್ಜ್‌ಗಳನ್ನು ನಿರಾಕರಿಸಿದರು, ಮತ್ತು ಶಿಕ್ಷೆಯಾಗಿ, ಅವರಿಗೆ ದೀರ್ಘಾವಧಿಯ ಜೈಲು ಶಿಕ್ಷೆಯನ್ನು ನೀಡಲಾಯಿತು, ಬಂಧಿಸಲಾಯಿತು ಮತ್ತು ಜೈಲಿಗೆ ಹಾಕಲಾಯಿತು. ಈ ಶಿಕ್ಷೆಯು ಅವರ ಒಡನಾಡಿಗಳನ್ನು ಕೆರಳಿಸಿತು, ಅವರು ಮೇ 10 ರಂದು ಎದ್ದು ತಮ್ಮ ಬ್ರಿಟಿಷ್ ಅಧಿಕಾರಿಗಳನ್ನು ಹೊಡೆದುರುಳಿಸಿದರು ಮತ್ತು ಯುರೋಪಿಯನ್ ಪಡೆಗಳಿಲ್ಲದ ದೆಹಲಿಗೆ ಮೆರವಣಿಗೆ ನಡೆಸಿದರು. ಅಲ್ಲಿ ಸ್ಥಳೀಯ ಸಿಪಾಯಿ ಗ್ಯಾರಿಸನ್ ಮೀರತ್ ಪುರುಷರೊಂದಿಗೆ ಸೇರಿಕೊಂಡಿತು ಮತ್ತು ರಾತ್ರಿಯ ಹೊತ್ತಿಗೆ ವಯಸ್ಸಾದ ಪಿಂಚಣಿದಾರ ಮೊಘಲ್ ಚಕ್ರವರ್ತಿ ಬಹದ್ದೂರ್ ಷಾ II ನಾಮಮಾತ್ರವಾಗಿ ಪ್ರಕ್ಷುಬ್ಧ ಸೈನಿಕರಿಂದ ಅಧಿಕಾರಕ್ಕೆ ಮರಳಿದರು. ದೆಹಲಿಯ ವಶಪಡಿಸಿಕೊಳ್ಳುವಿಕೆಯು ಇಡೀ ದಂಗೆಗೆ ಒಂದು ಗಮನವನ್ನು ನೀಡಿತು ಮತ್ತು ನಂತರ ಉತ್ತರ ಭಾರತದಾದ್ಯಂತ ಹರಡಿತು. ಮೊಘಲ್ ಚಕ್ರವರ್ತಿ ಮತ್ತು ಅವನ ಮಕ್ಕಳು ಮತ್ತು ಪದಚ್ಯುತ ಮರಾಠ ಪೇಶ್ವೆಯ ದತ್ತುಪುತ್ರ ನಾನಾ ಸಾಹಿಬ್ ಹೊರತುಪಡಿಸಿ, ಯಾವುದೇ ಪ್ರಮುಖ ಭಾರತೀಯ ರಾಜಕುಮಾರರು ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸೇರಲಿಲ್ಲ.

ಸ್ವಾತಂತ್ರ್ಯ ಹೋರಾಟಗಾರರು ದೆಹಲಿಯನ್ನು ವಶಪಡಿಸಿಕೊಂಡ ಸಮಯದಿಂದ, ದಂಗೆಯನ್ನು ನಿಗ್ರಹಿಸಲು ಬ್ರಿಟಿಷ್ ಕಾರ್ಯಾಚರಣೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಬೇಸಿಗೆಯಲ್ಲಿ ದೆಹಲಿ, ಕಾನ್ಪುರ ಮತ್ತು ಲಕ್ನೋದಲ್ಲಿ ಹತಾಶ ಹೋರಾಟಗಳು ಮೊದಲು ಬಂದವು; ನಂತರ 1857-58 ರ ಚಳಿಗಾಲದಲ್ಲಿ ಲಕ್ನೋದ ಸುತ್ತಮುತ್ತಲಿನ ಕಾರ್ಯಾಚರಣೆಗಳನ್ನು ಸರ್ ಕಾಲಿನ್ ಕ್ಯಾಂಪ್ಬೆಲ್ ನಿರ್ದೇಶಿಸಿದರು; ಮತ್ತು ಅಂತಿಮವಾಗಿ 1858 ರ ಆರಂಭದಲ್ಲಿ ಸರ್ ಹಗ್ ರೋಸ್ ಅವರ "ಮಾಪಿಂಗ್ ಅಪ್" ಅಭಿಯಾನಗಳು. ಜುಲೈ 8, 1859 ರಂದು ಶಾಂತಿಯನ್ನು ಅಧಿಕೃತವಾಗಿ ಘೋಷಿಸಲಾಯಿತು.

ಕಿತ್ತೂರ ಚೆನ್ನಮ್ಮ

ಈ ವರ್ಷ ೨೦೨೩. ನೂರು ವರ್ಷದ ಹಿಂದೆ ನಡೆದ ಒಂದು ಸ್ವಾತಂತ್ರ್ಯಕ್ಕಾಗಿ ಹೋರಾಟ ಇಂದು ನಾವು ನೆನಯಬೇಕು. ವರ್ಷ ೧೯೨೩ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹೆಣ್ಣುಗಳಲ್ಲಿ ಯಾರೆಂದು ಕೇಳಿದರೆ ನಮ್ಮ ತಲೆ ಮಾಸಿದ ಮಂದಿಯಲ್ಲಿ ಬರುವ ಉತ್ತರ, ಝಾನ್ಸಿ ರಾಣಿ ಲಕ್ಷ್ಮೀಬಾಯಿ. ಈಕೆಗಿಂತ ಹಿಂಡಿನಲ್ಲಿ ಯಾರಾದರೂ ತಮ್ಮ ನಾಡಿಗೆ ಹೋರಾಡಿದ ಹೆಣ್ಣುಗಳಿದ್ದಾರೆಯೇ? ಎಂದು ಕೇಳಿದರೆ "ಇಲ್ಲ" ಎಂಬ ಉತ್ತರವೇ ಹೆಚ್ಚು.

ಚೆನ್ನಮ್ಮ ಭಾರತದ ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ. ಅವಳು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ರೋಮಾಂಚಕ ಉರಿಯುತ್ತಿರುವ ಕಣ್ಣಿನಿಂದ ಏಕಾಂಗಿಯಾಗಿ ನಿಂತಳು. ರಾಣಿ ಚೆನ್ನಮ್ಮ ಅವರನ್ನು ಓಡಿಸುವಲ್ಲಿ ಯಶಸ್ವಿಯಾಗಲಿಲ್ಲ.

ಆದರೆ ಅವರು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಅನೇಕ ಮಹಿಳೆಯರನ್ನು ಏಳುವಂತೆ ಮಾಡಿದರು. ಆಕೆ ಕರ್ನಾಟಕ ರಾಜ್ಯದ ಕಿತ್ತೂರಿನ ಸಂಸ್ಥಾನದ ಚೆನ್ನಮ್ಮ ರಾಣಿ. ಇಂದು ಅವಳು ಕಿತ್ತೂರು ರಾಣಿ ಚೆನ್ನಮ್ಮ ಎಂದು ಪ್ರಸಿದ್ಧಳಾಗಿದ್ದಾಳೆ.

ರಾಣಿ ಚೆನ್ನಮ್ಮ ತನ್ನ 15 ನೇ ವಯಸ್ಸಿನಲ್ಲಿ ಕಿತ್ತೂರಿನ ಆಡಳಿತಗಾರ ಮಲ್ಲಸರ್ಜ ದೇಸಾಯಿ ಅವರನ್ನು ವಿವಾಹವಾದರು. ಆಕೆಯ ಪತಿ 1816 ರಲ್ಲಿ ತೀರಿಕೊಂಡ ನಂತರ ಆಕೆಯ ವೈವಾಹಿಕ ಜೀವನವು ದುಃಖದ ಕಥೆಯಂತೆ ಕಾಣುತ್ತಿತ್ತು. ಈ ಮದುವೆಯಿಂದ ಆಕೆಗೆ ಒಬ್ಬನೇ ಮಗನಿದ್ದನು, ಆದರೆ ವಿಧಿಯು ದುರಂತ ಆಟವಾಡಿದಂತೆ ತೋರುತ್ತಿತ್ತು. ಅವಳ ಜೀವನದಲ್ಲಿ. ಆಕೆಯ ಮಗ 1824 ರಲ್ಲಿ ಕೊನೆಯುಸಿರೆಳೆದನು, ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡಲು ಏಕಾಂಗಿ ಆತ್ಮವನ್ನು ಬಿಟ್ಟನು.

ಲ್ಯಾಪ್ಸ್ ಸಿದ್ಧಾಂತವನ್ನು ಬ್ರಿಟಿಷರು ಸ್ಥಳೀಯ ರಾಜ್ಯಗಳ ಮೇಲೆ ಹೇರಿದರು. ಈ ಘೋಷಣೆಯ ಅಡಿಯಲ್ಲಿ, ಸ್ಥಳೀಯ ಆಡಳಿತಗಾರರು ತಮ್ಮ ಸ್ವಂತ ಮಕ್ಕಳಿಲ್ಲದಿದ್ದರೆ ಮಗುವನ್ನು ದತ್ತು ತೆಗೆದುಕೊಳ್ಳಲು ಅನುಮತಿಸಲಾಗಲಿಲ್ಲ.

ಅವರ ಪ್ರದೇಶವು ಸ್ವಯಂಚಾಲಿತವಾಗಿ ಬ್ರಿಟಿಷ್ ಸಾಮ್ರಾಜ್ಯದ ಭಾಗವಾಯಿತು.

ಆ ಸಮಯದಲ್ಲಿ, ಈಸ್ಟ್ ಇಂಡಿಯಾ ಕಂಪನಿಯು ದೇಶದ ಹಲವು ಪ್ರದೇಶಗಳ ಮೇಲೆ ಸಾಮ್ರಾಜ್ಯಶಾಹಿ ಆಡಳಿತದ ಅಧಿಕಾರವನ್ನು ಹೊಂದಿತ್ತು ಮತ್ತು ಅನೇಕ ಭಾರತೀಯ ರಾಜ್ಯಗಳನ್ನು **'ಲ್ಯಾಪ್ಸ್ ಡಾಕ್ಟ್ರಿನ್** 'ಎಂಬ ವಿಲೀನ ನೀತಿಯ ಅಡಿಯಲ್ಲಿ ಸೇರಿಸಿಕೊಂಡಿತ್ತು. ಸಿದ್ಧಾಂತದ ಪ್ರಕಾರ, ಈಸ್ಟ್ ಇಂಡಿಯಾ ಕಂಪನಿಯ ನಿಯಂತ್ರಣದಲ್ಲಿರುವ ಯಾವುದೇ ಭಾರತೀಯ ರಾಜಪ್ರಭುತ್ವದ ರಾಜ್ಯವು ಅದರ ರಾಜವಂಶದ ಸ್ಥಾನಮಾನವನ್ನು ರದ್ದುಗೊಳಿಸುತ್ತದೆ ಮತ್ತು ಆದ್ದರಿಂದ ಆಡಳಿತಗಾರನು "ಅಸಮರ್ಥನಾಗಿದ್ದರೆ ಅಥವಾ ಪುರುಷ ಉತ್ತರಾಧಿಕಾರಿ ಇಲ್ಲದೆ ಸತ್ತರೆ" ಬ್ರಿಟಿಷ್ ಭಾರತಕ್ಕೆ ಸೇರಿಕೊಳ್ಳುತ್ತಾನೆ.

ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡು ಅವನನ್ನು ಸಿಂಹಾಸನದ ಉತ್ತರಾಧಿಕಾರಿಯನ್ನಾಗಿ ಮಾಡುವ ಚೆನ್ನಮ್ಮನ ನಿರ್ಧಾರವು ಈಸ್ಟ್ ಇಂಡಿಯಾ ಕಂಪನಿಗೆ ಒಳ್ಳೆಯದಾಗಲಿಲ್ಲ, ಮತ್ತು ಆತನನ್ನು ಗಡಿಪಾರು ಮಾಡುವಂತೆ ಅವರು ಆದೇಶಿಸಿದರು.

ಅವಳು ಅನಿಯಂತ್ರಿತ ಸಿದ್ಧಾಂತ ಮತ್ತು ಶಿವಲಿಂಗಪ್ಪನ ವನವಾಸವನ್ನು ಸ್ವೀಕರಿಸಲು ನಿರಾಕರಿಸಿದಳು ಮತ್ತು ಬಾಂಬೆ ಲೆಫ್ಟಿನೆಂಟ್-ಗವರ್ನರ್ ಲಾರ್ಡ್ ಎಲ್ಫಿನ್‌ಸ್ಟೋನ್‌ಗೆ ತನ್ನ ಮಗನನ್ನು ರಾಜನನ್ನಾಗಿ ಮಾಡಿಕೊಳ್ಳಲು ಮನವಿ ಮಾಡಿದಳು. ಮನವಿಯನ್ನು ತಿರಸ್ಕರಿಸಲಾಯಿತು, ಮತ್ತು ಧಾರವಾಡ ಕಲೆಕ್ಟರೇಟ್ ಕಿತ್ತೂರಿನ ಆಡಳಿತವನ್ನು ವಹಿಸಿಕೊಂಡಿತು.

1847 ರಲ್ಲಿ ಆಗಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಡಾಲ್‌ಹೌಸಿ 1847 ರಲ್ಲಿ ಅಧಿಕೃತವಾಗಿ ಸಿದ್ಧಾಂತವನ್ನು ಉಚ್ಚರಿಸುವುದಕ್ಕೆ ಮುಂಚೆಯೇ, 1824 ರಲ್ಲಿ ಸಾಮ್ರಾಜ್ಯವನ್ನು ವಶಪಡಿಸಿಕೊಂಡಿದ್ದರಿಂದ ಅವರ ಬ್ರಿಟಿಷರ ಹತಾಶೆ ಸ್ಪಷ್ಟವಾಗಿ

ಗೋಚರಿಸಿತು. ಕಿತ್ತೂರು ಸಂಸ್ಥಾನವು ಶ್ರೀ ಠಾಕ್ರೆಯವರ ಉಸ್ತುವಾರಿಯಲ್ಲಿ ಧಾರವಾಡ ಕಲೆಕ್ಟರೇಟ್ ಆಡಳಿತಕ್ಕೆ ಒಳಪಟ್ಟಿತು. ಶ್ರೀ ಚಾಪ್ಲಿನ್ ಈ ಪ್ರದೇಶದ ಆಯುಕ್ತರಾಗಿದ್ದರು. ಇಬ್ಬರೂ ಹೊಸ ಆಡಳಿತಗಾರ ಮತ್ತು ರಾಜಪ್ರತಿನಿಧಿಯನ್ನು ಗುರುತಿಸಲಿಲ್ಲ, ಮತ್ತು ಕಿತ್ತೂರು ಬ್ರಿಟಿಷ್ ಆಡಳಿತವನ್ನು ಒಪ್ಪಿಕೊಳ್ಳಬೇಕು ಎಂದು ತಿಳಿಸಿದರು.

ಆಕೆಯ ನಿರಂತರ ಪ್ರತಿರೋಧದಿಂದಾಗಿ, ಬ್ರಿಟಿಷ್ ಸೇನೆಯು ಕಿತ್ತೂರಿನ ಮೇಲೆ 21 ಅಕ್ಟೋಬರ್ 1824 ರಂದು 20,000 ಪುರುಷರು ಮತ್ತು 400 ಬಂದೂಕುಗಳೊಂದಿಗೆ ದಾಳಿ ಮಾಡಿತು. ಅವಳ ಆಭರಣಗಳು ಮತ್ತು 1.5 ಮಿಲಿಯನ್ ಮೌಲ್ಯದ ಒಡವೆಗಳನ್ನು ವಶಪಡಿಸಿಕೊಳ್ಳುವುದು, ಆಕೆಯನ್ನು ಆರ್ಥಿಕವಾಗಿ ದುರ್ಬಲಗೊಳಿಸುವುದು ಮತ್ತು ನಂತರ ಅವಳನ್ನು ಕೆಳಗಿಳಿಸುವುದು ಇದರ ಉದ್ದೇಶವಾಗಿತ್ತು.

ರಾಣಿ ಚೆನ್ನಮ್ಮ ಮತ್ತು ಸ್ಥಳೀಯ ಜನರು ಬ್ರಿಟಿಷ್ ಉನ್ನತತೆಯನ್ನು ಬಲವಾಗಿ ವಿರೋಧಿಸಿದರು. ಠಾಕ್ರೆ ಕಿತ್ತೂರಿನ ಮೇಲೆ ದಾಳಿ ಮಾಡಿದರು. ನಂತರ ನಡೆದ ಯುದ್ಧದಲ್ಲಿ, ಠಾಕ್ರೆಯ ಜೊತೆಗೆ ನೂರಾರು ಬ್ರಿಟಿಷ್ ಸೈನಿಕರು ಕೊಲ್ಲಲ್ಪಟ್ಟರು. ಸಣ್ಣ ಆಡಳಿತಗಾರನ ಕೈಯಲ್ಲಿ ಸೋಲಿನ ಅವಮಾನ ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು. ಅವರು ಮೈಸೂರು ಮತ್ತು ಶೋಲಾಪುರದಿಂದ ದೊಡ್ಡ ಸೈನ್ಯಗಳನ್ನು ತಂದು ಕಿತ್ತೂರನ್ನು ಸುತ್ತುವರಿದರು.

ರಾಣಿ ಚೆನ್ನಮ್ಮ ಯುದ್ಧವನ್ನು ತಪ್ಪಿಸಲು ತನ್ನ ಅತ್ಯುತ್ತಮ ಪ್ರಯತ್ನ ಮಾಡಿದಳು; ಅವರು ಚಾಪ್ಲಿನ್ ಮತ್ತು ಬಾಂಬೆ ಪ್ರೆಸಿಡೆನ್ಸಿಯ ಗವರ್ನರ್ ಅವರೊಂದಿಗೆ ಮಾತುಕತೆ ನಡೆಸಿದರು, ಕಿತ್ತೂರು ಅವರ ಆಡಳಿತದಲ್ಲಿ ಬಿದ್ದಿತು. ಇದು ಯಾವುದೇ ಪರಿಣಾಮ ಬೀರಲಿಲ್ಲ. ಚೆನ್ನಮ್ಮ ಯುದ್ಧ ಘೋಷಿಸಲು ಒತ್ತಾಯಿಸಲಾಯಿತು. 12 ದಿನಗಳ ಕಾಲ, ವೀರ ರಾಣಿ ಮತ್ತು ಅವಳ ಸೈನಿಕರು ತಮ್ಮ ಕೋಟೆಯನ್ನು ರಕ್ಷಿಸಿದರು.

ಆದರೆ ಸಾಮಾನ್ಯ ಲಕ್ಷಣದಂತೆ, ದೇಶದ್ರೋಹಿಗಳು ನುಸುಳಿದರು ಮತ್ತು ಕ್ಯಾನನ್‌ಗಳಲ್ಲಿ ಗನ್‌ಪೌಡರ್‌ನಲ್ಲಿ ಮಣ್ಣು ಮತ್ತು ಸಗಣಿಯನ್ನು ಬೆರೆಸಿದರು. ಸಂಖ್ಯಾತ್ಮಕವಾಗಿ ಕೆಳಮಟ್ಟದ ಶಕ್ತಿಯನ್ನು ಹೊಂದಿದ್ದರೂ, ಚೆನ್ನಮ್ಮ ಕಠಿಣ ಹೋರಾಟವನ್ನು ಮಾಡಿದರು ಮತ್ತು ಮೊದಲ ಸುತ್ತಿನ ಯುದ್ಧವನ್ನು ಗೆದ್ದರು. ಬ್ರಿಟಿಷ್ ಸೈನ್ಯವು ಭಾರೀ ನಷ್ಟವನ್ನು ಎದುರಿಸಿತು, ಮತ್ತು ಅಂತಿಮವಾಗಿ, ಇಬ್ಬರು ಬ್ರಿಟಿಷ್ ಅಧಿಕಾರಿಗಳು, ಸರ್ ವಾಲ್ಟರ್ ಎಲಿಯಟ್ ಮತ್ತು ಶ್ರೀ ಸ್ಟೀವನ್ಸನ್ ಅವರನ್ನು ಸಂಧಾನದಲ್ಲಿ ಮೇಲುಗೈ ಸಾಧಿಸಲು ಒತ್ತೆಯಾಳುಗಳಾಗಿ ತೆಗೆದುಕೊಳ್ಳಲಾಯಿತು. ಬ್ರಿಟಿಷರು ಯುದ್ಧವನ್ನು ಕೊನೆಗೊಳಿಸಿ ತನ್ನ ಮಗನನ್ನು ಆಳಲು ಅನುಮತಿಸಿದರೆ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಚೆನ್ನಮ್ಮ ಒಪ್ಪಿಕೊಂಡರು. ಈಸ್ಟ್ ಇಂಡಿಯಾ ಕಂಪನಿಯ ಕಮಿಷನರ್ ಚಾಪ್ಲಿನ್ ಈ ಪ್ರಸ್ತಾಪವನ್ನು ತೆಗೆದುಕೊಂಡರು ಮತ್ತು ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಯಿತು.

ಆದಾಗ್ಯೂ, ಅನಿರೀಕ್ಷಿತ ತಿರುವುಗಳಲ್ಲಿ, ಬ್ರಿಟಿಷ್ ಪಡೆಗಳು ಎರಡನೇ ಸುತ್ತಿನ ದಾಳಿಯನ್ನು ಪ್ರಾರಂಭಿಸಿದವು. ಅವರು ಒಂದು ಸಣ್ಣ ಹಳ್ಳಿಯ ಮಹಿಳೆಗೆ ಸೋತ ಅವಮಾನವನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಮೈಸೂರು ಮತ್ತು ಶೋಲಾಪುರ (ಸೊಲ್ಲಾಪುರ) ದಿಂದ ಸೈನ್ಯವನ್ನು ಕಟ್ಟಿಕೊಂಡರು.

ಅವರು ಆಕೆಯ ಇಬ್ಬರು ಸೈನಿಕರನ್ನು ಮನವೊಲಿಸಿದರು, ಹಸುವಿನ ಸಗಣಿ ಮತ್ತು ಮಣ್ಣನ್ನು ಕ್ಯಾನನ್‌ಗಳಿಗೆ ಬಳಸುವ ಗನ್‌ಪೌಡರ್‌ನೊಂದಿಗೆ ಬೆರೆಸುವ ಮೂಲಕ ಅವಳಿಗೆ ದ್ರೋಹ ಬಗೆದರುರಾಣಿಯನ್ನು ಸೋಲಿಸಲಾಯಿತು (1824 CE). ಆಕೆಯನ್ನು ಸೆರೆಯಾಳಾಗಿ ಕರೆದುಕೊಂಡು ಹೋಗಿ ಜೀವನಪರ್ಯಂತ ಬೈಲಹೊಂಗಲ ಕೋಟೆಯಲ್ಲಿ ಇರಿಸಲಾಗಿತ್ತು.

ಈ ಸಮಯದಲ್ಲಿ, ಆಕೆಯನ್ನು ಸೆರೆಹಿಡಿದು ಬೈಲಹೊಂಗಲ ಕೋಟೆಯಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಅವಳು 21 ಫೆಬ್ರವರಿ 1829 ರಂದು ನಿಧನರಾದರು.

1. Puzzle: There are two ducks in front of a duck, two ducks behind a duck and a duck in the middle. How many ducks are there?

2**. Puzzle:** Five people were eating apples, A finished before B, but behind C. D finished before E, but behind B. What was the finishing order?

3. Puzzle: The day before two days after the day before tomorrow is Saturday. What day is it today?

Begin at the left bottom of the corner squares, move clockwise around the perimeter, and finish in the at the center square to spell a nine-letter word. You must fill in the empty squares with your own letter.

	O	
H	E	I
C	L	C

View the blocks on the left from the orange point and direction of the arrow. Which image on the right is the correct view?



REBUS PUZZLES 7



Eleven letter Indian city I am ?

Hints :: 2,4,10 is a Unit of Length .

Last 6 letters is a Fruit Name.

9,5,3 is a Soap Name.

1,8,3 is used by a Student

7,8,3 letters is a Bird Name.

6,7,5,3 is an organ in the Face.

ANSWERS

Quickies 1) SVIMS Quickies 2) SAMS Quickies 3) A COFFIN

STEP DOWN PYRAMID 1) STRIDES 2) DRIEST 3) DIETS 4) TIES 5)SIT 6)IS 7) I

REBUS PUZZLE 1) SIT UPS 2) COUNT THE WAYS 3) BROKEN HEARTS 4) PRETTY PLEASE 5)DOWN HILL 6) NO ONE TO BLAME 7) BIG BABY 8) LITTLE LEAGUE 9) FAT CHANCE 10)HIGH FREQUENCY 11) COFFEE BREAK 12)BED SPREAD 13)PUT TWO & TWO TOGETHER 14) TWO UNDER PAR 15) LOOKING OUT FOR NUMBER ONE 16) JUST RIGHT



Compiled by : Mr. Ananth banwasi

ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗ: ಸಾಹಿತ್ಯ ಸಂವಾದ, ವಿಶೇಷ ಉಪನ್ಯಾಸ ಕಾರ್ಯಕ್ರಮ.

ಕಾದಂಬರಿಗೆ ತೂಕ ಬರಬೇಕಾದರೆ ಅದಕ್ಕೆ ಆಳವಾದ ಚಿಂತನೆ ಬೇಕು: ಡಾ। ಎಸ್. ಎಲ್. ಭೈರಪ್ಪ

ಯಾವುದೇ ಪದಬಳಕೆಯನ್ನು ವಿವಿಧ ಸನ್ನಿವೇಶಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಮಾಡುವಾಗ ಯೋಚಿಸಿ ಮಾಡಬೇಕು. ಕತೆ, ಕಾದಂಬರಿ,

ಪ್ರಬಂಧ ಅಥವಾ ಇತರ ಯಾವುದೇ ಲೇಖನಗಳನ್ನು ಬರೆದಾಗ ಅದನ್ನು ಪುನಃ ಪುನಃ ಪರಿμ್ಕರಿಸಬೇಕಾದ ಅವಶ್ಯಕತೆ ಇರುತ್ತದೆ. ಅದಕ್ಕಾಗಿ ನಾವು ಭಾಷೆಯ ಸರಿಯಾದ ಅಧ್ಯಯನವನ್ನು ಮಾಡಿರಬೇಕು. ಬರಹಗಾರರು ಕಲ್ಪನಾಶೀಲರಾಗಿರಬೇಕು. ತತ್ವಶಾಸ್ತ್ರವನ್ನು ತಿಳಿದಿರಬೇಕು. ಕಥೆಯ ಮೂಲಕ ತತ್ವಶಾಸ್ತ್ರದ ಬಗ್ಗೆ ಹೇಳಲು, ತಿಳಿಯಲು ಸಾಧ್ಯ. ವೇದೋಪನಿಷತ್ತುಗಳ ಕಾಲದಿಂದಲೂ ತತ್ವಜ್ಞಾನವನ್ನು ಋಷಿಮುನಿಗಳು ಕಥೆಗಳ ಮೂಲಕವೇ ಹೇಳುತ್ತಾ ಬಂದರು. ಕಥೆ ಇಲ್ಲದೆ ಹೋದರೆ ಗಂಭೀರ ತತ್ವಗಳನ್ನು ಹೇಳುವುದಕ್ಕೆ ಆಗಲಾರದು. ಕಾದಂಬರಿಗಳಲ್ಲಿ ವಾಸ್ತವಾಂಶಗಳ ಜೊತೆಗೆ ಕಲ್ಪನಾಶಕ್ತಿಯೂ ಮುಖ್ಯ. ಆಳವಾದ ಚಿಂತನೆ, ಕಲ್ಪನೆ ಇವೆರಡೂ ಅಧ್ಯಯನದಿಂದ ಮಾತ್ರ ಸಾಧ್ಯ. ಕಾದಂಬರಿಗೆ ತೂಕ ಬರಬೇಕಾದರೆ ಅದಕ್ಕೆ ಆಳವಾದ ಚಿಂತನೆ ಬೇಕು. ಎಂದು ಖ್ಯಾತ ಕಾದಂಬರಿಕಾರ, ಪದ್ಮಭೂಷಣ ಡಾ. ಎಸ್. ಎಲ್. ಭೈರಪ್ಪ ಅವರು ಅಭಿಪ್ರಾಯ ಪಟ್ಟರು. ಅವರು ಜು.21ರಂದು ಮುಂಬೈ ವಿಶ್ವವಿದ್ಯಾನಿಲಯ, ಕಲೀನಾ ಕ್ಯಾಂಪಸ್ ನ ಜೆ.ಪಿ. ನಾಯಕ್ ಸಭಾ ಭವನದಲ್ಲಿ ಕನ್ನಡ ವಿಭಾಗದ ಸ್ನಾತಕೋತ್ತರ ಮತ್ತು ಸಂಶೋಧನ ವಿದ್ಯಾರ್ಥಿಗಳೊಂದಿಗೆ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಡಾ.ಜಿ.ಎನ್.ಉಪಾಧ್ಯ ಹಾಗೂ ಡಾ. ಉಮಾ ರಾಮರಾವ್ ಅವರು ಸಂಪಾದಿಸಿ ಮುಂಬೈ ವಿವಿ ಕನ್ನಡ ವಿಭಾಗದ ಮೂಲಕ ಪ್ರಕಟಿಸಿದ 'ಭಾಷೆಗಳ ಗಡಿ ಗೆದ್ದ ಭಾರತೀಯ' ಗೌರವ ಗ್ರಂಥವನ್ನು ಡಾ. ಭೈರಪ್ಪನನರಿಗೆ ಸಮರ್ಪಿಸಲಾಯಿತು. ಡಾ.ಜಿ.ಎನ್. ಉಪಾಧ್ಯ ವಿರಚಿತ 'ಮುಂಬಯಿ ಕನ್ನಡ ಪರಿಸರ' ಗ್ರಂಥವನ್ನು ಶ್ರೀಯುತ ಅಶೋಕ ಸುವರ್ಣ ಅವರು ಬಿಡುಗಡೆಗೊಳಿಸಿದರು. ಡಾ. ಉಮಾ ರಾಮ ರಾವ್ ಬರೆದ ಕೃತಿ 'ಸಂಶೋಧನೆಯಲ್ಲಿ ಶಿಸ್ತು ಮತ್ತು ನೈತಿಕ ಪ್ರಜ್ಞೆ' ಹಾಗೂ ಕಲಾ ಭಾಗ್ವತ್ ಅವರ 'ಕನ್ನಡ ಸಂಶೋಧನೆಗೆ ಮುಂಬಯಿ ಕೊಡುಗೆ' ಕೃತಿಗಳನ್ನು ಶ್ರೀಯುತ ಎಸ್. ಎಲ್. ಭೈರಪ್ಪ ಅವರು ಲೋಕಾರ್ಪಣೆಗೊಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮುಂಬೈ ವಿಶ್ವವಿದ್ಯಾನಿಲಯ, ಕನ್ನಡ ವಿಭಾಗದ ಪ್ರಾಧ್ಯಾಪಕರು, ಮುಖ್ಯಸ್ಥರು ಆದ ಡಾ. ಜಿ. ಎನ್ ಉಪಾಧ್ಯ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ, ಹಿಮಾಲಯ ಸದೃಶ ವ್ಯಕ್ತಿತ್ವ ಹೊಂದಿರುವ ಭೈರಪ್ಪನವರು ಓದುಗರನ್ನು ಚುಂಬಕ ಶಕ್ತಿಯಂತೆ ಸೆಳೆಯುವ ಕಾದಂಬರಿಕಾರರು. ತಮ್ಮ ಮಾತು– ಕೃತಿಗಳ ಮೂಲಕ ದೇಶ ವಿದೇಶಗಳಲ್ಲಿ ಹೆಸರು ಮಾಡಿದವರು. ನಮ್ಮ ಸಾಂಸ್ಕೃತಿಕ ಹಿರಿಮೆ ಗರಿಮೆಯನ್ನು ಜಗದಗಲ ಪಸರಿಸಿದ ಸಾಹಿತಿ ಭೈರಪ್ಪನವರು. ವಿದ್ವಾಂಸರೆಂದರೆ, ಸಾಹಿತಿಗಳೆಂದರೆ ಹೀಗಿರುತ್ತಾರೆ ಎಂಬುದಕ್ಕೆ ಮಾದರಿಯಾದ ಅವರು ದೊಡ್ಡ ಓದುಗ ವರ್ಗವನ್ನು ಬೆಳೆಸಿದ, ತಾರಾ ಮೆರುಗನ್ನು ಹೊಂದಿರುವ ಶ್ರೇಷ್ಠ ಲೇಖಕರು. ಡಾ. ಭೈರಪ್ಪನವರ ಕೃತಿಗಳ ಆಳ, ಅಗಲ,ವೈಭವಗಳ ಕುರಿತು ಉಪನ್ಯಾಸ ನೀಡುವ ಮರಾಠಿಗರಾದ ಡಾ. ಸುಪ್ರಿಯಾ ಸಹಸ್ರಬುದ್ಧೆ ಅವರೇ ಇದಕ್ಕೆ ಸಾಕ್ಷಿ ಎಂಬುದಾಗಿ ಅಭಿಪ್ರಾಯಪಟ್ಟರು. ಡಾ.ಭೈರಪ್ಪನವರನ್ನು ಮುಂಬೈಗೆ ಬರಮಾಡಿಕೊಂಡು ಅವರ ಉಪಸ್ಥಿತಿಗೆ ಕಾರಣಕರ್ತರಾದ ಉಮಾ ರಾಮರಾವ್ ಅವರಿಗೆ ಅಭಿವಂದಿಸಿದರು. ಅಶೋಕ ಸುವರ್ಣ ಅವರಿಗೆ ಸ್ವಾಗತ ಕೋರಿದರು. ಸಾಹಿತಿ, ವಿಮರ್ಶಕರಾದ ಡಾ.ಸುಪ್ರಿಯಾ ಸಹಸ್ರಬುದ್ಧೆ ಅವರು 'ವಿಶ್ವಮಾನ್ಯ ಲೇಖಕರಾಗಿ ಭೈರಪ್ಪ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಡಾ.ಭೈರಪ್ಪ ಅವರ ಕಾದಂಬರಿಗಳ ಕುರಿತು ಮಾತನಾಡಿದ ಅವರು 'ದೈತ್ಯ ಪ್ರತಿಭೆ' ಎಂಬ ಪದ ಭೈರಪ್ಪನನರಿಗೆ ಸರಿಯಾಗಿ ಒಪ್ಪುತ್ತದೆ.ಅವರು ಬರಿಯ ಕನ್ನಡದ ಸಾಹಿತಿಯಲ್ಲ. ಅವರು ವಿಶ್ವಸಾಹಿತಿ ಎಂಬ ಉಪಾಧಿಗೆ ಪಾತ್ರರಾದವರು. ಪ್ರತಿಯೊಬ್ಬ ಸಾಹಿತಿಯೂ ತಾನು ಬರೆಯುವಾಗ ಒಂದು ವೃತ್ತವನ್ನು ನಿರ್ಮಿಸಿಕೊಂಡು ಅದರೊಳಗೆ ಬರೆಯುತ್ತಿರುತ್ತಾನೆ.ಆದರೆ ಭೈರಪ್ಪನವರು ಆ ವೃತ್ತವನ್ನು ದಾಟಿ ವಿಶ್ವಮಾನ್ಯರಾಗಿ ಜನರನ್ನು ತಲುಪಿದವರು. ಅವರ ಕೃತಿಗಳಲ್ಲಿ ಸಾರ್ವತ್ರಿಕ ವಿಷಯಗಳು ಅಡಕವಾಗಿರುವುದರಿಂದ ಲೋಕದೆಲ್ಲೆಡೆಯ ಜನರನ್ನು ತಲುಪಲು ಸಾಧ್ಯವಾಯಿತು. ಅವರ ಕಾದಂಬರಿಗಳಲ್ಲಿ ವೈವಾಹಿಕ, ಕೌಟುಂಬಿಕ, ಸಾಮಾಜಿಕ, ಕರುಣೆ, ಮಾನವತೆ ಇತ್ಯಾದಿ ಹಲವಾರು ಅಂಶಗಳಿವೆ.ಅವರು ಕೇವಲ ಕನ್ನಡದ ಸಾಹಿತಿಯಲ್ಲ, ಅವರು ನಮ್ಮೆಲ್ಲರ ಸಾಹಿತಿ. ನೋಬೆಲ್ ಪ್ರಶಸ್ತಿ ಪಡೆಯಲು ಯೋಗ್ಯರಾದವರು ಎಂಬುದಾಗಿ ಭೈರಪ್ಪನವರ ಬರವಣಿಗೆ, ಚಿಂತನೆಗಳ ವಿಶೇಷತೆಯನ್ನು ಎತ್ತಿ ಹೇಳಿದರು.

ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾ ರಾಮರಾವ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ವಿಶೇಷ ಉಪನ್ಯಾಸಕಾರರಾದ ಡಾ.ಸುಪ್ರಿಯಾ ಸಹಸ್ರಬುದ್ಧೆ ಅವರನ್ನು ಪರಿಚಯಿಸುತ್ತಾ, ಡಾ.ಸಹಸ್ರಬುದ್ಧೆ ಅವರ ವಿದ್ವತ್ತು ಮತ್ತು ಡಾ.ಭೈರಪ್ಪನವರ ಕೃತಿಗಳನ್ನು ಓದಿ ಅವರು ಮಾಡಿದ ಪ್ರೌಢ ವಿಮರ್ಶೆಗಳು ಬೆರಗು ಮೂಡಿಸುವಂತಹುದು. ಸರಳ, ನಿಸ್ಪೃಹ ವ್ಯಕ್ತಿತ್ವದ ಅವರು ಭೈರಪ್ಪನವರ ಕಾದಂಬರಿಗೆ ಸರಿಸಾಟಿಯಾಗುವಂತಹ ಕಾದಂಬರಿಗಳು ಮರಾಠಿಯಲ್ಲಿಲ್ಲ ಎಂದು ಒಪ್ಪಿಕೊಳ್ಳುವ ಮುಕ್ತ ಮನಸ್ಸು, ಹೃದಯ ವೈಶಾಲ್ಯತೆ ಉಳ್ಳವರು ಎಂದರು.

ಡಾ.ಎಸ್ ಎಲ್. ಭೈರಪ್ಪ, ಡಾ. ಸುಪ್ರಿಯಾ ಸಹಸ್ರಬುದ್ಧೆ, ಡಾ.ಜಿ ಎನ್ ಉಪಾಧ್ಯ, ಡಾ. ಉಮಾ ರಾಮರಾವ್ ಅವರನ್ನು ಶಾಲು ಹೊದಿಸಿ, ಫಲಗಳನ್ನಿತ್ತು ಗೌರವಿಸಲಾಯಿತು. ಡಾ.ಭೈರಪ್ಪ ಅವರ ಕೃತಿಗಳ ಆಯ್ದ ಭಾಗಗಳನ್ನು ಕಂಠದಾನ ಕಲಾವಿದರಾದ ಸುರೇಂದ್ರ ಕುಮಾರ್ ಮಾರ್ನಾಡ್ ಮತ್ತು ಸಂಶೋಧನ ವಿದ್ಯಾರ್ಥಿ ನಳಿನಾ ಪ್ರಸಾದ್ ಅವರು ವಾಚಿಸಿದರು. ಸಹಪ್ರಾಧ್ಯಾಪಕರಾದ ಡಾ.ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಕಾರ್ಯಕ್ರಮವನ್ನು ಸಂಯೋಜಿಸಿ, ನಿರೂಪಿಸಿದರು. ಮುಂಬೈಯ ಅನೇಕ ಗಣ್ಯರು ಮತ್ತು ವಿಭಾಗದ ವಿದ್ಯಾರ್ಥಿಗಳು ಹಾಜರಿದ್ದರು. ವಿದ್ಯಾ ರಾಮಕೃಷ್ಣ ಅವರು ತಾಂತ್ರಿಕ ಸಹಕಾರ ನೀಡಿದರು.

ಅನಿತಾ ಪೂಜಾರಿ ಹಾಗೂ ಕಲಾ ಭಾಗ್ವತ್ ಅವರಿಗೆ 'ಶೋಧ ಸಿರಿ' ಪುರಸ್ಕಾರ

ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ರಚನೆಗೊಂಡ ಸಂಶೋಧನ ಸಂಪ್ರಬಂಧವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಹಿರಿಯ ಸಂಶೋಧಕರಾದ ಡಾ.ಲೀಲಾ ಬಿ. ಅವರು 'ಶೋಧ ಸಿರಿ' ಎಂಬ ಪುರಸ್ಕಾರವನ್ನು ಸ್ಥಾಪಿಸಿದ್ದು, ಈ ಚೊಚ್ಚಲ ಪುರಸ್ಕಾರಕ್ಕೆ ವಿಭಾಗದ ಸಂಶೋಧನ ವಿದ್ಯಾರ್ಥಿಗಳಾದ ಅನಿತಾ ಪೂಜಾರಿ ಹಾಗೂ ಕಲಾ ಭಾಗ್ವತ್ ಆಯ್ಕೆಯಾಗಿದ್ದಾರೆ.

